ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

KARNATAKA STATE AKKAMAHADEVI WOMEN'S UNIVERSITY, VIJAYAPURA

"ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಮಹಿಳಾ ಕಾರ್ಮಿಕರ ಒಂದು ಸ್ತ್ರೀವಾದಿ ಅಧ್ಯಯನ"

(ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಾದರ ಪಡಿಸುತ್ತಿರುವ ಸಾರಲೇಖ)

ಸಂಶೋಧನಾ ವಿದ್ಯಾರ್ಥಿನಿ

ತೇಜಶ್ವಿನಿ ಚಾಂದಕವಟೆ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ.

ಮಾರ್ಗದರ್ಶಕರು

ಪ್ರೊ.ಹೇಮಲತ ಎಚ್.ಎಂ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ.

ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಮಹಿಳಾ ಕಾರ್ಮಿಕರ ಒಂದು ಸ್ತ್ರೀವಾದಿ ಅಧ್ಯಯನ

ಪ್ರಸ್ತಾವನೆ :

ಕೃಷಿಯಿಂದ ಪ್ರಾರಂಭವಾದ ಮಾನವರ ನಾಗರಿಕತೆ ಕಾಲಾನುಕ್ರಮದಲ್ಲಿ ಅತ್ಯಂತ ವಿಶಾಲವಾದ ದುಡಿಮೆ ಹಾಗೂ ಆಹಾರ ಒದಗಿಸುವ ಕ್ಷೇತ್ರವಾಗಿ ಬೆಳೆಯಿತು. ಆಹಾರ ಬೆಳೆಗಳಿಗೆ ಸೀಮಿತವಾಗಿದ್ದ ವ್ಯವಸಾಯವು ಕ್ರಮೇಣ ವಾಣಿಜ್ಯ ಬೆಳೆಗಳಿಗೆ ವಿಸ್ತಾರಗೊಂಡಿತು. ಆಹಾರ ಬೆಳೆಗಳು ಜನರ ಉಳಿವಿಗೆ ಪೂರಕವಾಗುವುದರ ಜೊತೆಗೆ ಆದಾಯೋತ್ಪನ ಕ್ಷೇತ್ರವಾಗಿ ರೂಪಗೊಂಡಿತು. ಆಹಾರ ಬೆಳೆ ಮತ್ತು ವಾಣಿಜ್ಯ ಬೆಳೆಗಳನ್ನು ಸಂಪೂರ್ಣವಾಗಿ ಪ್ರತ್ಯೇಕಗೊಳಿಸಲಾಗದಿದ್ದರೂ ಬೆಳೆಗಳ ಅವಧಿ, ಲಕ್ಷಣ, ನಿರ್ವಹಣೆ, ಮಾರುಕಟ್ಟೆ ಮುಂತಾದ ವಿಷಯಗಳು ಭಿನ್ನವಾಗಿವೆ.ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಆಯಾ ಪ್ರದೇಶದ ಹವಾಗುಣದ ಅನುಗುಣವಾಗಿ ಬೆಳೆಯಲಾಗುತ್ತದೆ. ಆಹಾರ ಬೆಳೆಗಳು ಅಂದಾಜು ಶೇ.60.83 ರಷ್ಟು ಭೂಮಿಯಲ್ಲಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳು ಅಂದಾಜು ಶೇ.25.43 ರಷ್ಟು ಭೂಮಿಯನ್ನು ಆಕ್ರಮಿಸಿವೆ. ಭಾರತದಲ್ಲಿ 296.65 ಮಿಲಿಯನ್ ಟನ್ ಗಳಷ್ಟು ಆಹಾರ ಬೆಳೆಗಳನ್ನು ಉತ್ಪಾದಿಸಲಾಗಿದೆ. ವಾಣಿಜ್ಯ ಬೆಳೆಗಳನ್ನು 319.57 ಮಿಲಿಯನ್ ಟನ್ ಗಳಷ್ಟು ಉತ್ಪಾದಿಸಲಾಗಿದೆ (2019–20).

ತೋಟಗಾರಿಕೆ ಕೃಷಿಯು ಒಂದು ವಾಣಿಜ್ಯ ಕೃಷಿಯಾಗಿದ್ದು, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕೃಷಿಯಾಗಿದೆ. ಕಳೆದ 2 ದಶಕಗಳಲ್ಲಿ ಈ ವಲತದ ಬೆಳೆವಣಿಗೆಯು 5.5% ರಷ್ಟಾಗಿದೆ. ಇಲ್ಲಿ ವಾಣಿಜ್ಯ ಬೆಳೆಗಳನ್ನು ಲಾಭದ ಉದ್ದೇಶಕ್ಕಾಗಿ ಬೆಳೆಯುತ್ತಾರೆ. ತೋಟದಲ್ಲಿ ವರ್ಷವಿಡಿ ಒಂದೇ ಬೆಳೆಯನ್ನು ಬೆಳೆಯಲಾಗುತ್ತದೆ. ಇದು ಕೃಷಿ ಕುಟುಂಬಕ್ಕೆ ಮಾತ್ರವಲ್ಲದೆ ಭೂರಹಿತ ಕುಟುಂಬಗಳಿಗೆ ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುತ್ತದೆ. ಈ ರೀತಿಯ ಕೃಷಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರು ಮತ್ತು ಬಂಡವಾಳ ಅವಶ್ಯಕತೆಯಿರುತ್ತದೆ. ತೋಟಗಾರಿಕೆಯಲ್ಲಿ ಬೆಳೆದ ಬೆಳೆಗಳನ್ನು ತೋಟದಲ್ಲಿ ಅಥವಾ ಕಾರ್ಖಾನೆಗಳಲ್ಲಿ ಸಂಸ್ಕರಿಸಬಹುದಾಗಿದೆ.

ತೋಟಗಾರಿಕೆಯ ಬೆಳೆವಣಿಗೆಯ ಇತಿಹಾಸ

ಅಂತರಾಷ್ಟ್ರೀಯ ಮಟ್ಟದಲ್ಲಿ ತೋಟಗಾರಿಕೆ:

ತೋಟಗಾರಿಕೆಯು ಒಂದು ಪ್ರಾಚೀನ ಅನ್ವೇಷಣೆಯಾಗಿದೆ. ಸುಮಾರು 10,000 ವರ್ಷಗಳ ಹಿಂದೆ ಪೂರ್ವಜ್ಜರು ವೃತ್ತಿಯ ಆಧಾರದ ಮೇಲೆ ಮತ್ತು ಕರಕುಶಲದ ರಹಸ್ಯಗಳನ್ನು ಅರಿತು ತೋಟಗಾರಿಕೆಯನ್ನು ಕಂಡು ಹಿಡಿದರು. ಪೂರ್ವಜ್ಜರು ಬೇಟೆಯಿಂದ ಆಹಾರ ಸಂಗ್ರಹಣೆ ಮಾಡುವುದನ್ನು ನಿಲ್ಲಿಸಿದರು. ಕೃಷಿಯನ್ನು ತೋಟಗಾರಿಕೆಗೆ ಬದಲಾಯಿಸಿದರು. ಇತಿಹಾಸದಲ್ಲಿ ಪೂರ್ವಸಂಗ್ರಹಕಾರರೆಂದರೆ ಸುಮರಿಯನ್, ಈಜಿಪ್ಟ್, ಚೈನೀಸ್ ಮತ್ತು ಕೊರಿಯನ್ ರೈತರು. ಇವರು ಆಹಾರ ಮತ್ತು ಔಷಧದ ಸಮಸ್ಯೆಗಳಿಗೆ ಮತ್ತು ಪರಿಹಾರಕ್ಕಾಗಿ ಸಸ್ಯಗಳನ್ನು ಬೆಳೆಯಲು ಪ್ರಾರಂಭಿಸಿದರು. ಇಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ ಯಶಸ್ಸನ್ನು ಗಳಿಸಿದರು. ಈ ಪರಂಪರೆಯು

ಪೋಷಕರಿಂದ ಮಕ್ಕಳಿಗೆ,ಶಿಕ್ಷಕರಿಂದ ಶಿಷ್ಯರಿಗೆ ಬಳುವಳಿಯಾಗಿ ಹೋಗುತ್ತವೆ. ಈ ಪರಂಪರೆಯ ವಾರುಸುದಾರರು ಯುವ ಪೀಳೀಗೆಯಾಗಿದೆ. ಪೂರ್ವಜ್ಜರ ಜ್ಞಾನವು ಒಂದು ರಹಸ್ಯವಾಗಿದ್ದು ಇದನ್ನು ಕಥೆಗಳು, ಪಂಚಾಂಗಗಳು, ಗಿಡಮೂಲಿಕೆಗಳು ಮತ್ತು ಇತಿಹಾಸಗಳಲ್ಲಿ ಉಲ್ಲೇಖಿಸಲಾಗಿದೆ. ಇತಿಹಾಸದ ಪೂರ್ವದಲ್ಲಿಯೇ ಬೀಜಗಳನ್ನು ಸಂಗ್ರಹಿಸಲಾಗುತ್ತಿತ್ತು ಈ ಕಲೆಯನ್ನು ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ನೀಡಿದ್ದು ಇದು ನಮ್ಮ ಸಂಸ್ಕೃತಿಯ ಭಾಗವಾಗಿದೆ. ಜನರ ಅಗತ್ಯತೆಗಳನ್ನು ಪೊರೈಸಲು ತೋಟಗಾರಿಕೆಯ ಅಭಿವೃದ್ಧಿಗಾಗಿ ಮತ್ತು ಅದರ ಕಲೆಯನ್ನು ಉಳಿಸುವದಕ್ಕಾಗಿ ಜನರಿಗೆ ತರಬೇತಿ ನೀಡುವುದು ಮತ್ತು ತಂತ್ರಜ್ಞಾನಗಳ ಬಳಕೆಯನ್ನು ಮಾಡುವುದರ ಮೂಲಕ ತೋಟಗಾರಿಕೆಯಲ್ಲಿ ಸುಧಾರಣೆಯನ್ನು ಮತ್ತು ಅಭಿವೃದ್ಧಿಯನ್ನು ಮಾಡಬಹುದಾಗಿದೆ. ಜಗತ್ತಿನಲ್ಲಿಯೇ ಚೈನಾ ತೋಟಗಾರಿಕೆ ಬೆಳೆಗಳನ್ನು (594.05 ಮೀ.ಟ) ಉತ್ಪಾದಿಸಿ ಮೊದಲನೇ ಸ್ಥಾನದಲ್ಲಿದೆ, ಭಾರತವು (141.2 ಮೀ.ಟ) ಎರಡನೆ ಸ್ಥಾನದಲ್ಲಿದೆ ಮತ್ತು ಅಮೇರಿಕಾ(33,12 ಮೀ.ಟ) 3ನೇ ಸ್ಥಾನದಲ್ಲಿದ್ದರೆ, ಟರ್ಕಿ (25.96 ಮೀ.ಟ) 4ನೇ ಸ್ಥಾನದಲ್ಲಿದೆ.

ಭಾರತದಲ್ಲಿ ತೋಟಗಾರಿಕೆ :

ಮೊಘಲ್ ಚಕ್ರವರ್ತಿಗಳು ಭಾರತಕ್ಕೆ ತೋಟಗಾರಿಕೆಯನ್ನು ಪರಿಚಯಿಸಿದರು. ನಂತರ ಇಂಗ್ಲೀಷ್ ಬ್ಯಾಪಿಸ್ಟ್ ಮಿಷನರಿ ರೆವ್ ವಿಲಿಯಂ ಕ್ಯಾರಿ ಅವರು 1820 ರಲ್ಲಿ ದೇಶದಲ್ಲಿ ಕೃಷಿಯ ಪ್ರಚಾರ ಮತ್ತು ಅಭಿವೃದ್ಧಿಗಾಗಿ ಭಾರತದಲ್ಲಿ ಅಗ್ರಿ–ಹಾರ್ಟಿಕಲ್ಚರಲ್ ಸೊಸೈಟಿಯನ್ ಸ್ಥಾಪಿಸಿದರು. ಭಾರತೀಯ ಸಮಾಜವು ಸಂಪೂರ್ಣವಾಗಿ ಮರೆತು ಹೋಗಿರುವ ವಿವಿಧ ರೀತಿಯ ತರಕಾರಿಗಳು, ಹಣ್ಣು ಹಂಪಲಗಳು, ಗಿಡಮೂಲಿಕೆಗಳನ್ನು ಸಂಗ್ರಹಿಸಿ ಅವುಗಳನ್ನು ಮಾರುಕಟ್ಟೆಗೆ ಪರಿಚಯಿಸುವುದಕ್ಕಾಗಿ ಈ ಸೊಸೈಟಿಯನ್ನು ಸ್ಥಾಪಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಪಡೆದ ನಂತರ "ಬೇಗ ಹಾಳಾಗುವ ಕೃಷಿ ಸರಕುಗಳ ಅಧ್ಯಯನ ತಂಡ" ದ ಶಿಫಾರಸುಗಳ ಆಧಾರದ ಮೇಲೆ, ಏಪ್ರಿಲ್ 1984 ರಲ್ಲಿ ಡಾ.ಎಮ್.ಎಸ್.ಸ್ವಾವಿನಾಥನ್ ಅವರ ನೇತೃತ್ವದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಂಡಳಿಯನ್ನು(NHB)ಸ್ಥಾಪಿಸಿತು.

ರಾಷ್ಟ್ರೀಯ ತೋಟಗಾರಿಕೆ ಮಂಡಳಿಯ ಮುಖ್ಯ ಉದ್ದೇಶ ತೋಟಗಾರಿಕೆ ಉದ್ಯಮದ ಸಮಗ್ರ ಅಭಿವೃದ್ಧಿಯನ್ನು ಸುಧಾರಿಸುವುದು, ಹಣ್ಣುಗಳು, ತರಕಾರಿಗಳ ಉತ್ಪಾದನೆ ಮತ್ತು ಸಂಸ್ಕರಣೆಯನ್ನು ಸಮನ್ವಯಗೊಳಿಸಲು, ಸುಸ್ಥಿರಗೊಳಿಸಲು ಸಹಾಯ ಮಾಡುವುದು. ಗುಣಮಟ್ಟದ ಸಸಿಗಳನ್ನು ನೆಡಲು ಮತ್ತು ಅವುಗಳ ಲಭ್ಯತೆಯನ್ನು ಒದಗಿಸುವಲ್ಲಿ ಸಹಾಯ ಮಾಡುವುದು. ಭಾರತದಲ್ಲಿ ದ್ರಾಕ್ಷಿ ಉತ್ಪನದಲ್ಲಿ ಮೊದಲ ಸ್ಥಾನ ಪಡೆದ ರಾಜ್ಯ ಮಹಾರಾಷ್ಟ್ರವಾಗಿದ್ದು(774 ಸಾವಿರ ಟನ್), ಎರಡನೇ ರಾಜ್ಯ ಕರ್ನಾಟಕವಾಗಿದೆ(330.3 ಸಾವಿರ ಟನ್). ವಿಜಯಪುರವು ಅತೀ ಹೆಚ್ಚು ದ್ರಾಕ್ಷಿಯನ್ನು ಬೆಳೆದು ಅಗ್ರಸ್ಥಾನದಲ್ಲಿದೆ. 13400 ಹೆಕ್ಟರ್ ಗಳಷ್ಟು ಬೆಳೆಯಲಾಗುತ್ತದೆ. ಇದರಲ್ಲಿ ಸುಮಾರು 12730 ಹೆಕ್ಟರ್(95%) ರಷ್ಟು ದ್ರಾಕ್ಷಿಯನ್ನು ಒಣದ್ರಾಕ್ಷಿಯನ್ನಾಗಿ ಮಾಡಿ ಮಾರಲಾಗುತ್ತದೆ. ಇದರಿಂದ ವರ್ಷಕ್ಕೆ ಸುಮಾರು 1300 ರಿಂದ 1600 ಕೋಟಿ ಲಾಭವಾಗುತ್ತದೆ.

ಕರ್ನಾಟಕದಲ್ಲಿ ತೋಟಗಾರಿಕೆ :

ಕರ್ನಾಟಕದಲ್ಲಿ ತೋಟಗಾರಿಕೆಯ ಬೆಳೆವಣಿಗೆಯು ಅದ್ಭುತವಾದ ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ರಾಜ್ಯದಲ್ಲಿ ಹಲವಾರು ತೋಟಗಾರಿಕೆ ಬೆಳೆಗಳನ್ನು ಅನಾದಿಕಾಲದಿಂದಲೂ ಬೆಳೆಯಲಾಗುತ್ತಿದ್ದರೂ, ಅವುಗಳ ವಾಣಿಜ್ಯ ಪ್ರಮಾಣದ ಬೇಸಾಯವು ಕೇವಲ ಎರಡೂವರೆ ಶತಮಾನಗಳ ಹಿಂದೆಯಷ್ಟೆ ಪ್ರಾರಂಭವಾಯಿತೆನ್ನಬಹುದು.

1932 ರಲ್ಲಿ ಎಚ್.ಸಿ.ಜವರಾಯರವರು ಲಾಲ್‌ಬಾಗ್ ಮತ್ತು ತೋಟಗಾರಿಕೆಯ ಇಲಾಖೆಗಳ ನಿರ್ವಹಣೆಯನ್ನು ಕೈಗೆತ್ತಿಕೊಂಡರು. 1942 ರಲ್ಲಿ ಇವರು ತೋಟಗಾರಿಕೆ ಇಲಾಖೆಯ ಮೊಟ್ಟ ಮೊದಲ ಫಾರ್ಮ ಅನ್ನು ಮದ್ದೂರಿನಲ್ಲಿ ಸ್ಥಾಪಿಸಿದರು. 1951 ರಲ್ಲಿ ಡಾ.ಎಮ್.ಎಚ್.ಮರಿಗೌಡರವರು ತೋಟಗಾರಿಕೆ ಮೇಲ್ವಿಚಾರಕರಾಗಿ ನಿಯುಕ್ತಿಗೊಂಡರು. 1963 ರಲ್ಲಿ ಸ್ವತಂತ್ರ ತೋಟಗಾರಿಕೆ ಇಲಾಖೆಯು ಅಸ್ತಿತ್ವಕ್ಕೆ ಬಂದು ಇವರ ಹುದ್ದೆಯನ್ನು ತೋಟಗಾರಿಕೆ ನಿರ್ದೇಶರ ಹುದ್ದೆಗೆ ಪರಿವರ್ತಿಸಲಾಯಿತು. ಈ ಮೊದಲು ಕೃಷಿ ಇಲಾಖೆಯಡಿಯಲ್ಲಿ ಇದ್ದಂತಹ ಅನೇಕ ತೋಟಗಾರಿಕೆ ಯೋಜನೆಗಳು ಈ ಹೊಸ ಇಲಾಖೆಗೆ ವರ್ಗಾಯಿಸಲ್ಪಟ್ಟವು. 1965 ರಲ್ಲಿ ತೋಟಗಾರಿಕೆ ಇಲಾಖೆ ಪುನರ್ ರಚನೆ ಆದನಂತರ ಅನೇಕ ಹೊಸ ಹುದ್ದೆಗಳು ಸೃಷ್ಟಿಸಲ್ಪಟ್ಟವು. ಡಾ.ಎಮ್.ಎಚ್.ಮರಿಗೌಡರವರು ತೋಟಗಾರಿಕೆಯನ್ನು ಹಳ್ಳಿಗಾಡುಗಳಿಗೆ ಮತ್ತು ಸಾಮಾನ್ಯ ರೈತರಿಗೆ ಮುಟ್ಟಿಸುವ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪ್ರಾರಂಭಿಸಿದರು. ಲಾಲ್‌ಬಾಗನಲ್ಲಿ ರೈತರ ಪ್ರಯೋಜನಕ್ಕೋಸ್ಕರ ಬೀಜ ಪರೀಕ್ಷೆ ಪ್ರಯೋಗಾಲಯ ಮತ್ತು ಸಸ್ಯ ಸಂರಕ್ಷಣೆ ಪ್ರಯೋಗಾಲಯಗಳನ್ನು ಸ್ಥಾಪಿಸಿದರು. ಕರ್ನಾಟಕ ರಾಜ್ಯದಲ್ಲಿ ಒಣ ತೋಟಗಾರಿಕೆ ಪದ್ಧತಿಗಳನ್ನು ಪರಿಚಯಿಸಿದರು. ಇವರ ಪ್ರೇರಣೆಯಿಂದ ರಾಜ್ಯದ ರೈತರು ಒಣ ತೋಟಗಾರಿಕೆಯನ್ನು ರಾಜ್ಯದ ಕಡಿಮೆ ಮಳೆ ಬೀಳುವ ಮತ್ತು ಬರ ಪಿಡಿತ ಪ್ರದೇಶಗಳಲ್ಲಿ ನಡೆಸಿ ಯಶಸ್ವಿಯಾದರು. ಮಿಶ್ರ ಬೆಳೆ ಪದ್ಧತಿ ಮತ್ತು ಅಂತರ್ ಬೆಳೆ ಪದ್ಧತಿಗಳನ್ನು ನಡೆಸಿ ಜನಪ್ರಿಯಗೊಳಿಸಿದ ಕೀರ್ತಿ ಡಾ.ಎಮ್.ಎಚ್.ಮರಿಗೌಡರಿಗೆ ಸಲ್ಲುತ್ತದೆ. ಕರ್ನಾಟಕವು ಇಡೀ ರಾಷ್ಟ್ರದಲ್ಲಿಯೇ ಒಂದು ಪ್ರತ್ಯೇಕ ತೋಟಗಾರಿಕೆ ಇಲಾಖೆಯನ್ನು ಪಡೆದ ಮೊದಲ ರಾಜ್ಯ. ಕರ್ನಾಟಕದ ಈ ಪದ್ಧತಿಯನ್ನು ಅನಂತರ ಇತರ ಅನೇಕ ರಾಜ್ಯಗಳು ಅನುಸರಿಸಿದವು.

ವಿಜಯಪುರದಲ್ಲಿ ತೋಟಗಾರಿಕೆ :

ರಾಜ್ಯದ 32 ಜಿಲ್ಲೆಗಳಲ್ಲಿ 1983 ರಲ್ಲಿ ತೋಟಗಾರಿಕೆ ಕಚೇರಿಗಳನ್ನು ಏಕಕಾಲದಲ್ಲಿಯೇ ಪ್ರಾರಂಭಿಸಲಾಯಿತು. ರಾಜ್ಯದ ಎಲ್ಲ ಜಿಲ್ಲೆಗಳ ಮುಖ್ಯ ತೋಟಗಾರಿಕೆ ಇಲಾಖೆಯು ಲಾಲ್‌ಬಾಗದಲ್ಲಿದೆ. 32 ಜಿಲ್ಲೆಗಳಲ್ಲಿ ವಿಜಯಪುರ ಜಿಲ್ಲೆಯು ತೋಟಗಾರಿಕೆಗೆ ಪ್ರಸಿದ್ಧವಾಗಿದೆ. ವಿಜಯಪುರದಲ್ಲಿ ತೋಟಗಾರಿಕೆಯನ್ನು ಮೂರು ಮುಖ್ಯ ವಲಯಗಳಾಗಿ ವಿಂಗಡಿಸಲಾಗಿದೆ. ಅವುಗಳು :

1.ಹಣ್ಣು ಬೆಳೆಯುವುದು(ಪೊಮೊಲಜಿ) : ತೋಟಗಾರಿಕೆಯಲ್ಲಿ ಇದು ಒಂದು ವಲಯವಾಗಿದ್ದು, ಪೊಮಮ್ ಅಂದರೆ ಹಣ್ಣು ಲೋಗೊಸ ಎಂದರೆ ಅಧ್ಯಯನ. ಪೊಮೊಲಾಜಿ ಎಂದರೆ ಹಣ್ಣುಗಳನ್ನು ಬೆಳೆಯುವುದು, ಇಲ್ಲಿ ಪ್ರದೇಶಗಳಿಗೆ ಮತ್ತು ಅಲ್ಲಿಯ ಹವಾಮಾನಕ್ಕೆ ತಕ್ಕಂತೆ ಹಣ್ಣುಗಳನ್ನು ಬೆಳೆಯಲಾಗುತ್ತದೆ. ಉದಾ: ಬಾಳಹಣ್ಣು, ದ್ರಾಕ್ಷಿ, ದಾಳಿಂಬೆ, ಸೇಬು, ಪೇರಲ್ ಇತ್ಯಾದಿ.

2.ಮಾರುಕಟ್ಟೆ ತೋಟಗಾರಿಕೆ(ತರಕಾರಿಗಳು): ಇದನ್ನು ಓಲೆರಿಕಲ್ಚರ್ ಎಂದು ಕರೆಯುತ್ತಾರೆ. ಇದರಲ್ಲಿ ಹಸಿರು ತರಕಾರಿಗಳನ್ನು ಬೆಳೆದು ಮಾರುಕಟ್ಟೆಗೆ ಮಾರಲಾಗತ್ತದೆ. ಉದಾ: ಬದನೆಕಾಯಿ, ಟೊಮೆಟೊ, ಬಟಾಣಿ, ಬೀನ್ಸ್, ಗಜ್ಜರಿ(ಕ್ಯಾರೇಟ್) ಇತ್ಯಾದಿ.

3.ಅಲಂಕಾರಿಕ ಕೃಷಿ(ಹೂಗಳು): ಇದನ್ನು ಹೂಗಳ ಕೃಷಿಗಾರಿಕೆ ಎಂದು ಕರೆಯಲಾಗುತ್ತದೆ. ಉದಾ: ಮಲ್ಲಿಗೆ, ಗುಲಾಬಿ, ದಾಸವಾಳ ಇತ್ಯಾದಿ.

ವಿಜಯಪುರದ ಹವಾಗುಣವು ಮುಂಜಾನೆ ಬಿಸಿಲಿನಿಂದ ಕೂಡಿದ್ದು, ರಾತ್ರಿ ತಂಪಾಗಿರುತ್ತದೆ. ವಾಣಿಜ್ಯ ಬೆಳೆಗಳು ಮತ್ತು ತೋಟಗಾರಿಕೆಯ ಬೆಳೆಗಳನ್ನು ಬೆಳೆಯಲು ಭೂಮಿ ಉತ್ತಮವಾಗಿದೆ. ಅಧಿಕ ಇಳುವರಿಯನ್ನು ಪಡೆಯಬಹುದಾಗಿದೆ. ವಿಜಯಪುರದ ವಾಣಿಜ್ಯ ಬೆಳೆಗಳಾದ ಬಾಳೆ(982 ಹೆ), ನಿಂಬೆ(12629 ಹೆ), ಪೈನಾಪಲ್(1 ಹೆ), ಸೀಬೆ(74 ಹೆ), ದ್ರಾಕ್ಷಿ(12960 ಹೆ), ಸಪೋಟ(44 ಹೆ), ದಾಳಿಂಬೆ(5205 ಹೆ) ಮತ್ತು ಪಪ್ಪಾಯಗಳಾಗಿವೆ(150 ಹೆ). ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಮಹಿಳೆಯರನ್ನು ಹೆಚ್ಚಾಗಿ ಕಾರ್ಮಿಕರನ್ನಾಗಿ ನೇಮಿಸಿಕೊಳ್ಳುತ್ತಾರೆ. ಮಹಿಳೆಯರು ಭೂಮಿಯಲ್ಲಿ ಸಸಿಗಳನ್ನು ನೆಡೆವುದರಿಂದ ಹಿಡಿದು ಬೆಳೆಗಳನ್ನು ಮಾರುಕಟ್ಟೆಗೆ ಮಾರಲು ಡಬ್ಬಿಗಳಲ್ಲಿ ತುಂಬುವವರೆಗೂ ಕೆಲಸ ಮಾಡುತ್ತಾರೆ. ವಾಣಿಜ್ಯ ಬೆಳೆಯು ಅಸಂಘಟಿತ ವಲಯದ ಭಾಗವಾಗಿರುವುದರಿಂದ ಅಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಬಗ್ಗೆ ತಿಳಿಯಬೇಕಾಗಿರುವುದು ಅತೀ ಅವಶ್ಯವಾಗಿದೆ.

ಅಸಂಘಟಿತ ವಲಯದಲ್ಲಿ ಮಹಿಳೆ :

ಅಸಂಘಟಿತ ವಲಯವು ಸರ್ಕಾರದ ಸ್ವಾಮ್ಯಗೆ ಒಳಪಡದೆ, ಸ್ವತಂತ್ರವಾಗಿ ಮಾಲಿಕರಿಂದ ಮತ್ತು ಕಾರ್ಮಿಕರಿಂದ ನಡೆಯುವ ವಲಯವಾಗಿದೆ. ಇಲ್ಲಿ ಯಾವುದೆ ಉದ್ಯೋಗದ ಭದ್ರತೆಯಗಲಿ, ಕಾರ್ಮಿಕ ಸಂಘಟನೆಗಳಾಗಲಿ ಇರುವುದಿಲ್ಲ. ತೋಟಗಾರಿಕೆಯು ಅಸಂಘಟಿತ ವಲಯಕ್ಕೆ ಸೇರಿದ್ದು, ಇಲ್ಲಿ ಮಾಲೀಕರ ಆಡಳಿತವಾಗಿದೆ. ತೋಟಗಾರಿಕೆಯಲ್ಲಿ ಹೆಚ್ಚಾಗಿ ಅನಕ್ಷರಸ್ಥರು ಕೆಲಸ ಮಾಡುತ್ತಾರೆ. ಅವರಿಗೆ ಯಾವುದೆ ಕಾನೂನುಗಳ ಅರಿವಿಲ್ಲದೆ ಇರುವುದರಿಂದ ಕಡಿಮೆ ಕೂಲಿಗೆ ಹೆಚ್ಚಿನ ಕೆಲಸವನ್ನು, ಹೆಚ್ಚಿನ ಸಮಯದಲ್ಲಿ ಮಾಡಿಸಿಕೊಳ್ಳುತ್ತಾರೆ. ಅನಕ್ಷರಸ್ಥರಲ್ಲಿ ಹೆಚ್ಚಿನ ಸಂಖ್ಯೆ ಮಹಿಳೆಯರದೆ ಆಗಿರುವುದರಿಂದ ಇಂತಹ ದೌರ್ಜ್ಯನಗಳಿಗೆ ಒಳಗಾಗುತ್ತಾರೆ. ಅಸಂಘಟಿತ ವಲಯದಲ್ಲಿ ನಿರ್ಧಿಷ್ಟ ವೇತನ ಅಥವಾ ಕೂಲಿ ಕೂಡುವುದಿಲ್ಲ. ಪುರುಷ ಕಾರ್ಮಿಕರಿಗಿಂತ ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಅಸಂಘಟಿತ ವಲಯದಲ್ಲಿ ಭಾಗವಹಿಸುತ್ತಾರೆ. ಮಹಿಳಾ ಕಾರ್ಮಿಕರು ಹೆಚ್ಚಾಗಿದ್ದು ಪೂರೈಕೆ ಬೇಡಿಕೆಗಿಂತ ಹೆಚ್ಚಾಗಿರುವುದರಿಂದ ಇವರು ಕೆಲಸ ಬಿಟ್ಟರೆ ಸೇರಿಕೊಳ್ಳಲು ಜನರು ಇರುವುದರಿಂದ ಇವರು ಕಡಿಮೆ ಕೂಲಿಗೆ ಹೆಚ್ಚು ಕೆಲಸವನ್ನು ಮಾಡುತ್ತಾರೆ. ಇವರಿಗೆ ಪುರುಷರಿಗೆ ನೀಡುವ ಕೂಲಿಗಿಂತ ಕಡಿಮೆ ಕೂಲಿ ನೀಡಲಾಗುತ್ತದೆ. ಮಹಿಳಾ ಕಾರ್ಮಿಕರಿಗೆ ಯಾವುದೇ ತಂತ್ರಜ್ಞಾನದ ಮಾಹಿತಿಯನ್ನು ನೀಡುವುದಿಲ್ಲ ಮತ್ತು ತರಬೇತಿಯನ್ನು ಕೊಡುವುದಿಲ್ಲ. ಮನೆಯ ಜವಾಬ್ದಾರಿಗಳಿಂದಾಗಿ ಹೆಚ್ಚು ಸಂಬಳ ಸಿಗುವಕಡೆ ಹೋಗಲು ಆಗುವುದಿಲ್ಲ. ಮನೆಯ ಹತ್ತಿರ ಅಥವಾ ತಾವು ಇದ್ದ ಪ್ರದೇಶದಲ್ಲಿ ಹೆಚ್ಚಾಗಿ ಕೆಲಸ ಮಾಡುತ್ತಾರೆ. ಇವರ ಕೆಲಸಗಳು ಕೂಡಾ ತಾತ್ಕಾಲಿಕ, ಗುತ್ತಿಗೆ ಆಧಾರಿತ, ದಿನಗೂಲಿ ಮತ್ತು ಋತುಮಾನಕ್ಕೆ ಸಂಬಂಧಿಸಿರುತ್ತವೆ. ಅಸಂಘಟಿತ

ವಲಯದಲ್ಲಿ ಸಂಘಟಿತ ವಲಯದಲ್ಲಿ ಕೆಲಸ ಮಾಡುವವರ ಸಂಖ್ಯೆಗಿಂತಲೂ ಹೆಚ್ಚು ಜನ ಕೆಲಸ ಮಾಡುತ್ತಾರೆ. ಭಾರತದಲ್ಲಿ ಒಟ್ಟು 485 ಮಿಲಿಯನ್ ಜನರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಶೇ.86 ರಷ್ಟು ಜನ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಕೃಷಿಯಲ್ಲಿ ಶೇ.90ಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಮಹಿಳಾ ಕಾರ್ಮಿಕರನ್ನು ಮಾರ್ಜಿನಲ್ ದುಡಿಮೆಗಾರರೆಂದು ಕರೆಯುತ್ತಾರೆ. ಮಾರ್ಜಿನಲ್ ಎಂದರೆ ವರ್ಷದಲ್ಲಿ 183 ದಿನ ಕೆಲಸ ಮಾಡಿ ಉಳಿದ ದಿನಗಳಲಿ ಕೆಲಸವಿಲ್ಲದೆ ಖಾಲಿ ಇರುವವರು.

ತೋಟಗಾರಿಕೆ ಅಥವಾ ಕೃಷಿಯಲ್ಲಿ ಕೆಲಸಗಳು ಸೀಮಿತ ಅವಧಿಗೆ ಮಾತ್ರ ಇರುತ್ತವೆ. ತೋಟಗಾರಿಕೆಯಲ್ಲಿ ಬೆಳೆಗಳು ಬಂದು ಮಾರುಕಟ್ಟೆಗೆ ಮಾರಟಕ್ಕೆ ಹೋದರೆ ಮಹಿಳೆಯರ ಕೆಲಸ ಅಲ್ಲಿಗೆ ಮುಗಿದು ಮುಂದಿನ ಸಿಜನ್ ಬರುವವರೆಗೂ ಮಹಿಳೆಯರಿಗೆ ಯಾವುದೆ ಕೆಲಸವೇ ಇರುವುದಿಲ್ಲ. ಕೆಲಸ ಹುಡುಕಿಕೊಂಡು ಬೇರೆ ಊರಿಗೆ ವಲಸೆ ಹೋಗಬೇಕು, ಇಲ್ಲವೇ ಮನೆಯಲ್ಲಿಯೆ ಇರಬೇಕು ಹಾಗಾಗಿ ಇವರನ್ನು ಸಿಜನಲ್ ದುಡಿಮೆಗಾರರೆಂದು ಕರೆಯಲಾಗುತ್ತದೆ ಮತ್ತು ಇವರು ಅಂಚಿಗೆ ತಳ್ಳಲ್ಪಟ್ಟವರಾಗಿದ್ದಾರೆ(ಮಾರ್ಜಿನಲ್).

ಭಾರತದಲ್ಲಿ ಒಟ್ಟು ಮಾರ್ಜಿನಲ್ ಕೆಲಸಗಾರರ ಸಂಖ್ಯೆ 89230 ಅದರಲ್ಲಿ ಮಹಿಳಾ ಮಾರ್ಜಿನಲ್ ಕೆಲಸಗಾರರ ಸಂಖ್ಯೆ 54363. ಕರ್ನಾಟಕದಲ್ಲಿ ಒಟ್ಟು ಮಾರ್ಜಿನಲ್ ಕೆಲಸಗಾರರ ಸಂಖ್ಯೆ 4170032, ಮಹಿಳಾ ಮಾರ್ಜಿನಲ್ ಕೆಲಸಗಾರರ ಸಂಖ್ಯೆ 2831522. ವಿಜಯಪುರದಲ್ಲಿ ಒಟ್ಟು ಮಾರ್ಜಿನಲ್ ಕೆಲಸಗಾರರ ಸಂಖ್ಯೆ 167639. ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಮಾರ್ಜಿನಲ್ ಕೆಲಸಗಾರರು 132902. ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಮಹಿಳಾ ಮಾರ್ಜಿನಲ್ ಕೆಲಸಗಾರರು 82242.

ತೋಟಗಾರಿಕೆಯಲ್ಲಿ ಮಹಿಳೆಯರ ದುಡಿಮೆಯ ಸ್ವರೂಪ :

ತೋಟಗಾರಿಕೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡಬಹುದಾದ ಇನ್ನೊಂದು ಕೃಷಿ ಕ್ಷೇತ್ರವಾಗಿದೆ. ತರಕಾರಿಗಳನ್ನು ಬೆಳೆಯುವುದು, ಅವುಗಳನ್ನು ಮಾರುಕಟ್ಟೆಗೆ ಮಾರುವುದು. ಮಾರುಕಟ್ಟೆಯಲ್ಲೂ ಕೂಡಾ ವರ್ಷಾನುಗಟ್ಟಲೆ ತರಕಾರಿಗಳಿಗೆ, ಹಣ್ಣುಗಳಿಗೆ ಬೇಡಿಕೆಯಿದೆ. ತೋಟಗಾರಿಕೆ ಕೃಷಿಯಲ್ಲಿ ಚಟುವಟಿಕೆಗಳನ್ನು ಬಿಡುವಿಲ್ಲದೆ ಮಾಡುವಂತದ್ದು. ಇಲ್ಲಿ ಮಹಿಳಾ ಕಾರ್ಮಿಕರಿಗೆ ಹೆಚ್ಚಿನ ಬೇಡಿಕೆ ಇದ್ದು ಈ ಕ್ಷೇತ್ರದಲ್ಲಿ ಅವರೇ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಾರೆ.

ದ್ರಾಕ್ಷಿ ಬೆಳೆಗಳನ್ನು ಬೆಳೆಯುವಲ್ಲಿ ಮಹಿಳಾ ಕಾರ್ಮಿಕರ ಪಾತ್ರ ಹಿರಿಯದಾಗಿದೆ. ಒಮ್ಮೆ ಸಸಿ ನೆಟ್ಟರೆ, ಕನಿಷ್ಠ 10 ರಿಂದ 15 ವರ್ಷ ಬೆಳೆ ತೆಗೆಯಬಹುದಾಗಿದೆ, ಹಳೆ ಸಸಿಯನ್ನು ಪೂರ್ತಿ ತಗೆದು ಕೇವಲ ಅದರ ಬಡ್ಡಿ(ಕಾಂಡ)ವನ್ನು ಬಿಟ್ಟರೆ ಅದು ಮತ್ತೆ ಚಿಗುರತ್ತದೆ ಇಲ್ಲವೆ ಪುನಃ ಸಸಿಗಳನ್ನು ನೆಡಬಹುದಾಗಿದೆ. ದ್ರಾಕ್ಷಿಯನ್ನು ಜನೇವರಿ ಅಥವಾ ಫೆಬ್ರುವರಿಯಲ್ಲಿ ಸಸಿ ನೆಟ್ಟರೆ ಅದನ್ನು ಆಗಷ್ಟ ಅಥವಾ ಸೆಪ್ಟಂಬರನಲ್ಲಿ ಸಸಿಗಳಿಗೆ ಕಲಂ ಕಟ್ಟುತ್ತಾರೆ ನಂತರ ಅದು ಬೆಳೆಯಲು ಪ್ರಾರಂಭಿಸುತ್ತದೆ. ಸಸಿಗಳಿಗೆ ಚಾಟ್ನಿ ಮಾಡಲಾಗುತ್ತದೆ, ಚಾಟ್ನಿ ಮಾಡಿದ ಕಡ್ಡಿಗೆ ಬಣ್ಣ ಹಚ್ಚಲಾಗುತ್ತದೆ. ಪುನಃ ಅಕ್ಟೋಬರ್ ಮತ್ತು ನವಂಬರ್‌ನಲ್ಲಿ ಕಾಯಿಗಳಿಗೆ ಚಾಟ್ನಿ ಮಾಡಲಾಗುತ್ತದೆ. ನಂತರ ಗಿಡಗಳು ಕಾಯಿ ಬಿಡಲು ಪ್ರಾರಂಭಿಸುತ್ತವೆ. ಮಾರ್ಚ ಮತ್ತು ಎಪ್ರೀಲ್ ನಲ್ಲಿ ಹಣ್ಣುಗಳು ಮಾರುಕಟ್ಟೆಗೆ ಬಂದಿರುತ್ತವೆ.

ದ್ರಾಕ್ಷಿ ಬೆಳೆಯುವಲ್ಲಿ ನಡೆಯುವ ಪ್ರತಿ ಚಟುವಟಿಕೆಗಳಲ್ಲಿ ಮಹಿಳಾ ಕಾರ್ಮಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಳ್ಳುತ್ತಾರೆ. ಉದಾ: ಸಸಿ ನೆಡುವುದರಿಂದ ಹಿಡಿದು ಹಣ್ಣುಗಳು ಮಾರುಕಟ್ಟೆಗೆ ಸಾಗಿಸುವವರೆಗೂ ಮಹಿಳೆಯರನ್ನು ಕೆಲಸಗಳಿಗೆ ನೇಮಿಸಿಕೊಳ್ಳುತ್ತಾರೆ. ಒಣ ದ್ರಾಕ್ಷಿ(ಮನೂಕ) ಮಾಡುವ ಚಟುವಟಿಕೆಯಲ್ಲೂ ಮಹಿಳೆಯರು ಭಾಗವಹಿಸುತ್ತಾರೆ. ವಿಜಯಪುರದ ತಾಲೂಕುಗಳಾದ ಬಬಲೇಶ್ವರ ಮತ್ತು ತಿಕೋಟಾಗಳಲ್ಲಿನ ಹವಾಗುಣ ಮತ್ತು ಅಲ್ಲಿಯ ಭೂಮಿಯು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಸೂಕ್ತವಾಗಿರುವುದರಿಂದ ಹೆಚ್ಚಿನ ಸಂಖ್ಯೆಯ ರೈತರು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ ಮತ್ತು ತೋಟಗಾರಿಕೆಯ ಬೆಳೆಗಳನ್ನು ಕಡಿಮೆ ಪ್ರಮಾಣದ ನೀರಿದ್ದರು ಸಹ ಬೆಳೆಗಳನ್ನು ಬೆಳೆಯಬಹುದಾಗಿದ್ದರಿಂದ ಮಹಿಳಾ ಕಾರ್ಮಿಕರನ್ನು ಹೆಚ್ಚಾಗಿ ನೇಮಿಸಿಕೊಂಡು ಬೆಳೆಗಳನ್ನು ಬೆಳೆಯುತ್ತಾರೆ ಆದ್ದರಿಂದ, ತೋಟಗಾರಿಕೆಯಲ್ಲಿ ಮತ್ತು ವಾಣಿಜ್ಯ ಬೆಳೆಗಳಲ್ಲಿ ಮಹಿಳೆಯರ ದುಡಿಮೆಯ ಬಗ್ಗೆ ತಿಳಿಯುವುದರ ಜೊತೆಗೆ, ಅವರ ಬುದುಕಿನ ಬಗ್ಗೆ ತಿಳಿಯುವುದಕ್ಕಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶಗಳು

1.ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಮಹಿಳಾ ಕಾರ್ಮಿಕರ ಪಾಲ್ಗೋಳ್ಳುವಿಕೆ ಬಗ್ಗೆ ತಿಳಿಯುವುದು.

2.ಮಹಿಳಾ ಕಾರ್ಮಿಕರ ಸಾಮಾಜಿಕ,ಆರ್ಥಿಕ,ಶೈಕ್ಷಣಿಕ ಮತ್ತು ಆರೋಗ್ಯ ಸ್ಥಿತಿಗಳನ್ನು ತಿಳಿಯುವುದು.

3.ಮಹಿಳಾ ಕಾರ್ಮಿಕರ ದುಡಿಮೆಯ ಸ್ವರೂಪವನ್ನು ಅರಿಯುವುದು.

4.ಮಹಿಳಾ ಕಾರ್ಮಿಕರ ಮೇಲೆ ತಂತ್ರಜ್ಞಾನ ಮತ್ತು ರಫ್ತು ಉದ್ಯೋಮದಿಂದ ಆಗುವ ಅನುಕೂಲ ಮತ್ತು ಅನಾನುಕಾಲದ ಬಗ್ಗೆ ತಿಳಿಯುವುದು.

5.ಜಾಗತೀಕರಣ ಮತ್ತು ರಾಸಾಯನಿಕ ಬಳಕೆಯಿಂದ ಮಹಿಳಾ ಕಾರ್ಮಿಕರ ಮೇಲೆ ಬೀರುವ ಪರಿಣಾಮಗಳನ್ನು ಅರಿಯುವುದು.

ಅಧ್ಯಯನದ ವೈಧಾನಿಕತೆ

ಸಂಶೋಧನೆಗೆ ಆಯ್ದುಕೊಂಡ ವಿಷಯಕ್ಕೆ ಅನುಗುಣವಾಗಿ ಅಧ್ಯಯನವು ಕ್ರಮಬದ್ಧವಾಗಿ ನಡೆಯಲು ಸೂಕ್ತವಾಗುವ ಕಾರ್ಯವಿಧಾನವೊಂದನ್ನು ಕೈಗೊಳ್ಳಬೇಕಾಗುತ್ತದೆ ಇದನ್ನು ಸಂಶೋಧನಾ ವೈಧಾನಿಕತೆ ಎನ್ನುತ್ತಾರೆ. ಈ ಅಧ್ಯಯನದಲ್ಲಿ ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ವಾಣಿಜ್ಯ ಬೆಳೆಗಳನ್ನು ಬೆಳೆಯುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳನ್ನು ತಿಳಿಯಲು ಮಾಹಿತಿ ಸಂಗ್ರಹಣೆಗಾಗಿ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುವುದು.

ಅಧ್ಯಯನಕ್ಕೆ ಸಂಬಂಧಿಸಿದ ಗ್ರಂಥಗಳು, ಸಂಶೋಧನ ಅಧ್ಯಯನಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ವೈಬ್‌ಸೈಟ್‌ಗಳು, ಯೂಟೂಬ್‌ಗಳು ಮತ್ತು ವರದಿಗಳ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನದಲ್ಲಿ ಉಪಯೋಗಿಸಲಾಗುವುದು.

ಅಧ್ಯಯನದ ಕ್ಷೇತ್ರ :

ಬಿಜಾಪುರ ಈಗ ಅಧಿಕೃತವಾಗಿ ವಿಜಯಪುರ ಎಂದು ಕರೆಯಲ್ಪಡುತ್ತದೆ. ವಿಜಯಪುರ 13 ತಾಲೂಕುಗಳನ್ನು ಹೊಂದಿದೆ ಅವು, ವಿಜಯಪುರ, ಇಂಡಿ, ಸಿಂದಗಿ, ಬಸವನಬಾಗೇವಾಡಿ, ಮುದ್ದೇಬಿಹಾಳ, ನಿಡಗುಂದಿ, ತಾಳಿಕೋಟಿ, ಬಬಲೇಶ್ವರ, ತಿಕೋಟಾ, ಚಡಚಣ, ದೇವರಹಿಪ್ಪರಗಿ, ಕೋಲಾರ ಮತ್ತು ಆಲಮೇಲ.

ಬಬಲೇಶ್ವರ ಮತ್ತು ತಿಕೋಟಾ ತಾಲ್ಲೂಕುಗಳನ್ನು ಸಂಶೋಧನಾ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಬಬಲೇಶ್ವರ ತಾಲೂಕು ವಿಜಯಪುರ ನಗರದಿಂದ 22 ಕಿ.ಮೀ ದೂರದಲ್ಲಿದೆ. 2011ರ ಜನಗಣತಿಯ ಪ್ರಕಾರ ಈ ಗ್ರಾಮದಲ್ಲಿ ಒಟ್ಟು 2133 ಕುಟುಂಬಗಳು ವಾಸಿಸುತ್ತಿವೆ. ಒಟ್ಟು ಜನಸಂಖ್ಯೆ 10645 ಆಗಿದ್ದು ಅದರಲ್ಲಿ 5405 ಪುರುಷರು, 5240 ಮಹಿಳೆಯರು. ಲಿಂಗಾನುಪಾತ ಗ್ರಾಮದಲ್ಲಿ 1000 ಕ್ಕೆ 969 ರಷ್ಟಿದೆ. ಸಾಕ್ಷತರೆಯ ಪ್ರಮಾಣ 65.9 ರಷ್ಟು. ಪುರುಷರ ಸಾಕ್ಷರತಾ ಪ್ರಮಾಣ 74.78% ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ 56.78% ರಷ್ಟಿದೆ. ಬಬಲೇಶ್ವರದಲ್ಲಿ ಮುಖ್ಯವಾಗಿ ಕಬ್ಬು, ದ್ರಾಕ್ಷಿ, ದಾಳಿಂಬೆ, ಜೋಳ, ನಿಂಬೆಹಣ್ಣು, ಈರುಳ್ಳಿ ಮತ್ತು ಅರಿಶಿನವನ್ನು ಬೆಳೆಯುತ್ತಾರೆ. ತಿಕೋಟಾ ತಾಲೂಕಿನ ಜನಗಣತಿ 2011 ರ ಪ್ರಕಾರ, ಗ್ರಾಮದಲ್ಲಿ ಒಟ್ಟು 2235 ಕುಟುಂಬಗಳು ವಾಸಿಸುತ್ತವೆ. ಗ್ರಾಮದ ಜನಸಂಖ್ಯೆ 11,984 ಆಗಿದ್ದು, ಪುರುಷರ ಸಂಖ್ಯೆ 6111 ಮತ್ತು ಮಹಿಳೆಯರ ಸಂಖ್ಯೆ 5873. ಸಾಕ್ಷರತೆಯ ಪ್ರಮಾಣ 70.02% ಅದರಲ್ಲಿ 78.8% ಪುರುಷರ ಸಾಕ್ಷರತೆಯಾಗಿದ್ದರೆ, ಮಹಿಳಾ ಸಾಕ್ಷರತೆ ಪ್ರಮಾಣ 61.64% ರಷ್ಟಿದೆ. ಲಿಂಗಾನುಪಾತ ಗ್ರಾಮದಲ್ಲಿ 1000ಕ್ಕೆ 948 ರಷ್ಟಿದೆ. ಗ್ರಾಮದಲ್ಲಿ ಮುಖ್ಯವಾಗಿ ಕಬ್ಬು, ದ್ರಾಕ್ಷಿ, ದಾಳಿಂಬೆ, ನಿಂಬೆ, ಅರಿಶಿನ ಬೆಳೆಯಲಾಗುತದೆ. ದ್ರಾಕ್ಷಿ ಮತ್ತು ದಾಳಿಂಬೆಯನ್ನು ಅತರಾಷ್ಟೀಯ ಮಾರುಕಟ್ಟೆಗೆ ರಫ್ತು ಮಾಡಲಾಗುತ್ತದೆ.

ಈ ಎರಡು ತಾಲ್ಲೂಕುಗಳಲ್ಲಿ ಹೆಚ್ಚಾಗಿ ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿ ಕ್ಷೇತ್ರದಲ್ಲಿ ಸುಮಾರು 70% ಜನ ಕೆಲಸ ಮಾಡುತ್ತಿದ್ದು, 60% ಭೂಮಿ ನೀರಾವರಿ ಹೊಂದಿದೆ. 40% ಭೂಮಿಯು ಒಣ ಬೇಸಾಯವನ್ನು ಹೊಂದಿದೆ. ತೋಟಗಾರಿಕೆ ಬೆಳೆಯನ್ನು ಬಬಲೇಶ್ವರದಲ್ಲಿ ಶೇ.6.75 ಬೆಳೆಗಳನ್ನು ಬೆಳೆಯುತ್ತಿದ್ದು ಅದರಲ್ಲಿ ದ್ರಾಕ್ಷಿ 2498 ಹೆ ಮತ್ತು ದಾಳಿಂಬೆ 46ಹೆ ಬೆಳೆಯುತ್ತಾರೆ. ತಿಕೋಟಾದಲ್ಲಿ ಶೇ.11.31 ರಷ್ಟು ಬೆಳೆಗಳನ್ನು ಬೆಳೆಯುತ್ತಿದ್ದು, ದ್ರಾಕ್ಷಿ 7416ಹೆ ಮತ್ತು ದಾಳಿಂಬೆ 560ಹೆ ಬೆಳೆಯುತ್ತಾರೆ. ವಿಜಯಪುರ ಜಿಲ್ಲೆಯಲ್ಲಿ ಹೆಚ್ಚು ಬಿಸಿಲು ಇರುವುದರಿಂದ ದ್ರಾಕ್ಷಿ ಬೆಳೆಗೆ ಉತ್ತಮವಾದ ವಾತಾವರಣವಿದ್ದು, ಬೆಳೆಯು ಉತ್ತಮವಾಗಿ ಬರುತ್ತದೆ.

ವಿಜಯಪುರ ಜಿಲ್ಲೆಯು ಪಂಚನದಿಗಳ ಬೀಡಾಗಿದ್ದು, ಕೃಷ್ಣ, ಭೀಮಾ, ಮಲಪ್ರಭಾ, ಘಟಪ್ರಭಾ ಮತ್ತು ಡೋಣಿ ನದಿಗಳನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಕಾಲುವೆ ನಿರ್ಮಾಣವಾಗಿದ್ದರಿಂದ ನೀರಿನ ಪ್ರಮಾಣ ಜಾಸ್ತಿಯಾಗಿದ್ದು, ಬೆಳೆಗಳನ್ನು ಉತ್ತಮ ಮಟ್ಟದಲ್ಲಿ ಬೆಳೆಯುತ್ತಿದ್ದಾರೆ. ಹೀಗಾಗಿ ಬೆಳೆಗಳನ್ನು ಬೆಳೆಯುವವರ ಸಂಖ್ಯೆಯು ಜಾಸ್ತಿಯಾಗಿದೆ. ಅಲ್ಲಿ ಕೆಲಸ ಮಾಡುವ ಮಹಿಳೆಯರ ದುಡಿಮೆ, ಸಾಮಾಜಿಕ, ಆರ್ಥಿಕ ಮತ್ತು ಆರೋಗ್ಯದ ಸಮಸ್ಯೆಗಳನ್ನು ತಿಳಿದುಕೊಳ್ಳಲು ಈ ಭಾಗಗಳ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ನಮೂನೆ :



ನಮೂನೆಯನ್ನು ಮಾದರಿ ಎಂದು ಕರೆಯುತ್ತಾರೆ. ಮಾದರಿ ಎಂದರೆ ಒಂದು ದೊಡ್ಡ ವಸ್ತುವಿನ ಚಿಕ್ಕ ಪ್ರತಿರೂಪವಾಗಿದ್ದು, ಇದು ಅತ್ಯಂತ ಜವಾಬ್ದಾರಿಯುತ ಕಾರ್ಯವಾಗಿದೆ. ಪ್ರಸ್ತುತ ಅಧ್ಯಯನಕ್ಕಾಗಿ ವಿಜಯಪುರ ಜಿಲ್ಲೆಯ ತಾಲೂಕುಗಳಾದ ಬಬಲೇಶ್ವರ ಮತ್ತು ತಿಕೋಟಾಗಳನ್ನು ಆಯ್ದು ಕೊಳ್ಳಲಾಗಿದೆ. ಗ್ರಾಮಗಳನ್ನು ಉದ್ದೇಶ ಪೂರ್ವಕವಾಗಿ ಆಯ್ಕೆಮಾಡಿಕೊಂಡು, ಪ್ರತಿ ತಾಲೂಕಿನಿಂದ 20 ಗ್ರಾಮಗಳನ್ನು ಆಯ್ಕೆಮಾಡಿಕೊಂಡು ಒಂದು ಗ್ರಾಮದಿಂದ 25 ಮಹಿಳಾ ಕಾರ್ಮಿಕರನ್ನು ಆಯ್ದುಕೊಂಡು ಒಂದು ತಾಲೂಕಿನಿಂದ 500 ಮಹಿಳೆಯರಂತೆ 1000 ಮಹಿಳೆಯರನ್ನು ಸಂದರ್ಶಿಸಲಾಗುವುದು.

ಮಾಹಿತಿ ಸಂಗ್ರಹಣಾ ವಿಧಾನ :

ಸಹಭಾಗಿ ಅವಲೋಕನ :

ವಾಣಿಜ್ಯ ಬೆಳೆಗಳನ್ನು ಬೆಳೆಯುವ ತೋಟಗಳಿಗೆ ಭೇಟಿ ನೀಡಿ ಮಹಿಳಾ ಕಾರ್ಮಿಕರ ಜನಜೀವನ, ಭಾಷೆ, ಸಂಸ್ಕೃತಿ ಮುಂತಾದವುಗಳ ಸೂಕ್ಷ್ಮ ಪರಿಚಯವನ್ನು ಪಡೆದು ಅವರ ವಿಶ್ವಾಸವನ್ನು ಗಳಿಸಿಕೊಂಡು, ತೋಟಗಾರಿಕೆಯ ಚಟುವಟಿಕೆಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಳ್ಳುತ್ತಾರೆ ಎಂಬುವುದನ್ನು ಅವಲೋಕಿಸಿ, ಅವರಿಂದ ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಈ ವಿಧಾನವನ್ನು ಬಳಸಿಕೊಳ್ಳಲಾಗುವುದು.

ಸಂದರ್ಶನ ಕೈಪಿಡಿ :

ವಾಣಿಜ್ಯ ಬೆಳೆಗಳನ್ನು ಬೆಳೆಯುವ ತೋಟಗಳಲ್ಲಿ ಕೆಲಸ ಮಾಡುವ ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದ ಅವರ ಜೀವನದ ನಿಜ ಸ್ಥಿತಿಗಳನ್ನು ತಿಳಿಯುವುದು, ಅವರ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಅರಿತುಕೊಳ್ಳುವುದರ ಜೊತೆಗೆ ಚರ್ಚೆ ಮಾಡಲು ಸಂದರ್ಶನ ವಿಧಾನವನ್ನು ಅಳವಡಿಸಿಕೊಳ್ಳಲಾಗುವುದು.

ಈ ಅಧ್ಯಯನಕ್ಕೆ ಪೂರಕವಾಗಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ತೋಟದ ಮಾಲೀಕರು ಮಹಿಳೆಯರಾಗಿದ್ದರೆ ಅವರನ್ನು ಮತ್ತು ರಾಸಾಯನಿಕಗಳನ್ನು ಪರೀಕ್ಷೆ ಮಾಡುವ ಅಧಿಕಾರಿಗಳನ್ನು, ಗ್ರಾಮದ ಅಧ್ಯಕ್ಷರನ್ನು ಭೇಟಿಯಾಗಿ ಸಂದರ್ಶನ ವಿಧಾನದಿಂದ ಮಾಹಿತಿಯನ್ನು ಸಂಗ್ರಹಿಸಲಾಗುವುದು

ಪ್ರಕರಣಗಳ ಅಧ್ಯಯನ :

ಮಹಿಳಾ ಕಾರ್ಮಿಕರ ಬದುಕಿನ ಒಳನೋಟ ತಿಳಿಯಲು ಮತ್ತು ಮಹಿಳೆಯರ ಜೀವನದ ಸಮಗ್ರ ವಿವರಣೆಯನ್ನು ನೀಡಲು ಮತ್ತು ಕಾರ್ಮಿಕರಾಗಿದ್ದು ಸ್ವತಂತ್ರವಾಗಿ ದುಡಿದು ಆರ್ಥಿಕ ಸಬಲರಾಗಿರುವವರನ್ನ, ರಾಸಾಯನಿಕಗಳ ಬಳಕೆಯಿಂದ ತೊಂದರೆಗೆ ಒಳಪಟ್ಟವರನ್ನು, ಮಹಿಳಾ ಮಾಲೀಕರಾಗಿದ್ದು ತೋಟಗಳಲ್ಲಿ ಕೆಲಸ ಮಾಡುವವರನ್ನು, ಮಹಿಳಾ ಕಾರ್ಮಿಕರ ಮಕ್ಕಳಲ್ಲಿ ಯಾರಾದರು ಸಾಧನೆಗಳನ್ನು ಮಾಡಿದ್ದರೆ(ಶಿಕ್ಷಣ,ಉದ್ಯೋಗ), ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವವರನ್ನು, ಜಿಲ್ಲಾ ಮತ್ತು ತಾಲೂಕುಗಳಲ್ಲಿ ಪಂಚಾಯಿತಿ ಅಧ್ಯಕ್ಷರು ಮತ್ತು ಸದ್ಯಸರಾಗಿದ್ದರೆ, ಕೋವಿಡ್ ಸಂದರ್ಬದಲ್ಲಿ ಮನೆಯವರನ್ನು ಕಳೆದುಕೊಂಡು ಪುನಃ ಜೀವನವನ್ನು ರೂಪಿಸಿರುವವರನ್ನು ಗುರುತಿಸಿ ಅವರ ವಿಚಾರಗಳನ್ನು ಪ್ರಕರಣ ಅಧ್ಯಯನದಲ್ಲಿ ಪ್ರಸ್ತುತ ಪಡಿಸುವುದಾಗಿದೆ.

ಕ್ರಿಯಾತ್ಮಕ ಸಂಶೋಧನಾ ವಿಧಾನ :

ಕ್ರಿಯಾತ್ಮಕ ಸಂಶೋಧನಾ ವಿಧಾನವು ಸಮಾಜ ಸಂಶೋಧನೆಯ ವೈಧಾನಿಕತೆಯಲ್ಲಿ ಬಳಸುವ ಒಂದು ವಿಧಾನವಾಗಿದ್ದು, ಇದು ಹೊಸ ಸಿದ್ಧಾಂತಗಳನ್ನು ಸೃಷ್ಟಿಸುವುದಾಗಿದೆ ಮತ್ತು ಹೊಸ ತತ್ವ, ಪರಿಕಲ್ಪನೆಗಳನ್ನು ಹುಟ್ಟುಹಾಕುವ ಅಥವಾ ಸಾಮಾಜಿಕ ಸಮಸ್ಯೆಗೆ ಪರಿಹಾರಗಳನ್ನು ಕಂಡುಹಿಡಿಯುವ ಗುರಿಯನ್ನು ಹೊಂದಿದೆ.

ಸಂಶೋಧನೆಯ ಜೊತೆ ಜೊತೆಗೆ ಕಾರ್ಯಗಳನ್ನು ಮಾಡಬಹುದಾಗಿದೆ. ಇದರ ಮೂಲ ತತ್ವ 'ಮೊದಲು ಬದಲಾವಣೆ, ಬದಲಾವಣೆಯಿಂದ ತೋರಿಬರುವ ನಿಜಸ್ಥಿತಿ!'ಯಾಗಿದೆ. ಅಂದರೆ ಒಂದು ವಿಷಯ ಅಥವಾ ಸಂಗತಿಯನ್ನು ಹಾಗೆ ಇಟ್ಟರೆ ಅದರ ನಿಜಾಂಶ ತಿಳಿಯುವುದಿಲ್ಲ ಅದರಲ್ಲಿ ಏನಾದರು ಬದಲಾವಣೆ ಮಾಡಿದರೆ ಅಥವಾ ತಂದರೆ ಅದಲ್ಲಿನ ವಾಸ್ತವತೆ ಅಥವಾ ಸಮಸ್ಯೆ ತಿಳಿಯಬಹುದಾಗುದೆ. ಕ್ರಿಯಾತ್ಮಕ ಸಂಶೋಧನದ ಭಾಗವಾಗಿ ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಲಾಗುವುದು.

- ಮಹಿಳಾ ಕಾರ್ಮಿಕರ ಸಬಲೀಕರಣಕ್ಕಾಗಿ ಮತ್ತು ಅವರನ್ನು ಒಟ್ಟುಗೂಡಿಸಿ ಅವರ ಹಕ್ಕುಗಳನ್ನು ಪಡೆಯಲು ಪ್ರೇರೇಪಿಸುವುದಕ್ಕಾಗಿ ಮಹಿಳಾ ಕಾರ್ಮಿಕರ ಸ್ವ-ಸಹಾಯ ಗುಂಪುಗಳನ್ನು ರಚಿಸುವುದು.
- ಮಹಿಳೆಯರನ್ನು ಕಾರ್ಮಿಕರೆಂದು ಪರಿಗಣಿಸಲು ಇಲಾಖೆಗೆ ಮನವಿಯನ್ನು ಸಲ್ಲಿಸುವುದು.
- ಮಹಿಳಾ ಕಾರ್ಮಿಕರ ಮಕ್ಕಳು ಶಾಲೆ ಬಿಟ್ಟವರಾಗಿದ್ದರೆ, ಅವರಿಗೆ ಶಿಕ್ಷಣದ ಮಹತ್ವವನ್ನು ತಿಳಿಸಿ, ಶಾಲೆಗೆ ಪುನಃ ಸೇರುವುದಕ್ಕೆ ಸಹಾಯಮಾಡುವುದು.
- ಅವರ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ನೀಡುವ ಶಿಷ್ಯವೇತನಗಳ ಮಾಹಿತಿಯನ್ನು ನೀಡುವುದು.
- ಗರ್ಭಿಣಿ ಸ್ತ್ರೀಯರಿಗೆ ತಾಯಿಯ ಕಾರ್ಡ ಇಲ್ಲದಿದ್ದ ಪಕ್ಷದಲ್ಲಿ ಕಾರ್ಡ ಮಾಡಿಸಲು ಸಹಾಯ ಮಾಡುವುದು.
- ತೋಟಗಾರಿಕೆ ಇಲಾಖೆಯವರು ನೀಡುವ ಸುರಕ್ಷಾ ಕಿಟ್‌ಗಳು ಅವರಿಗೆ ತಲುಪಿಸುವಂತೆ ಮಾಡುವುದು.
- ತೋಟಗಾರಿಕೆಯಲ್ಲಿ ಬೆಳೆಗಳಿಗೆ ಸಿಂಪಡಿಸುವ ಕೀಟನಾಶಕಗಳ ಬಗ್ಗೆ ಪಟ್ಟಿಮಾಡಿ ಅದನ್ನು ಲ್ಯಾಬ್ ಅಲ್ಲಿ ಟೆಸ್ಟ್ ಮಾಡಿಸಿ ಅದರ ಸಹಾಯದಿಂದ ಮಹಿಳೆಯರ ಆರೋಗ್ಯದ ಮೇಲಾಗುವ ಪರಿಣಾಮಗಳನ್ನು ತಿಳಿದುಕೊಂಡು ಅವರಿಗೆ ಜಾಗೃತಿಯನ್ನು ಮೂಡಿಸುವುದು.
- ಮಹಿಳಾ ಕಾರ್ಮಿಕರು ಅನಕ್ಷರಸ್ಥರಾಗಿದ್ದರೆ ಅವರಿಗೆ ಸ್ವಲ್ಪ ಮಟ್ಟಿಗಾದರು ಅಕ್ಷರದ ಜ್ಞಾನವನ್ನು ನೀಡಲು ಪ್ರಯತ್ನಿಸುವುದು.

ಅಧ್ಯಯನದ ಮಹತ್ವ :

ವಿಜಯಪುರ ಜಿಲ್ಲೆಯಲ್ಲಿ ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಯನ್ನು ಹೆಚ್ಚಾಗಿ ಬೆಳೆಯಲು ಇಲ್ಲಿರುವ ಹವಾಗುಣ ಕಾರಣವಾಗಿದ್ದು, ಇದು ಶುಷ್ಕ ಹವಾಮಾನ ಪ್ರದೇಶಗಳಾಗಿವೆ. 1970 ರಲ್ಲಿ ಸೀಡ್ ಲೇಸ್ ದ್ರಾಕ್ಷಿ ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದರು. ದ್ರಾಕ್ಷಿಯನ್ನು ಬೆಳೆದ ಮೇಲೆ ಶೇ.75 ರಷ್ಟನ್ನು ಒಣ ದ್ರಾಕ್ಷಿಯನ್ನಾಗಿ ಮಾಡುತ್ತಾರೆ. ಇನ್ನು ಉಳಿದ 25% ರಷ್ಟು ಬೆಳೆಯಲ್ಲಿ 23% ರಷ್ಟು ಟೇಬಲ್ ಟಾಪ್ ದ್ರಾಕ್ಷಿಗಳು ಅವು ಜನರಿಗೆ ಸೇವಿಸಲು(ತಿನ್ನಲು) ಮಾರುವಂತಹದಾಗಿವೆ. 2% ರಷ್ಟು ದ್ರಾಕ್ಷಿಯನ್ನು ವೈನ್ ಮಾಡುತ್ತಾರೆ. ವಿಜಯಪುರದಲ್ಲಿ 2 ವೈನ್ ಘಟಕಗಳಿವೆ. ಒಣ ದ್ರಾಕ್ಷಿಗೆ ಸಿಗುವಷ್ಟು ಮಹತ್ವ ಬೇರೆ ಬೆಳೆಗಳಿಗೆ ಸಿಗುವುದಿಲ್ಲ. ಬಬಲೇಶ್ವರ್ ಮತ್ತು ತಿಕೋಟಾ ತಾಲೂಕುಗಳಲ್ಲಿ ಹೆಚ್ಚಾಗಿ ಬೆಳೆಗಳನ್ನು ಬೆಳೆಯುತ್ತಾರೆ. ಹೀಗಾಗಿ ಇಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ವಿಶೇಷವಾಗಿ ಮಹಿಳೆಯರನ್ನು ಹೆಚ್ಚಾಗಿ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ತೋಟಗಳಲ್ಲಿ ಮಹಿಳೆಯರು ಕೈಗೊಳ್ಳವ

ಚಟುವಟಿಕೆಗಳೆಂದರೆ, ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಯ ಸಸಿಯನ್ನು ನೆಡುವುದು, ಅವುಗಳಿಗೆ ನಿರುಣಿಸುವುದು, ಗೊಬ್ಬರವನ್ನು ಹಾಕುವುದು, ಕಳೆ ಕಿಳುವುದು, ಚಾಟಣಿ ಮಾಡುವುದು, ಒಣ ದ್ರಾಕ್ಷಿ(ಮನೂಕ)ಯನ್ನು ಗಾತ್ರಕ್ಕೆ ತಕ್ಕ ಹಾಗೆ ಬೇರ್ಪಡಿಸಿ ಅವುಗಳನ್ನು ಪ್ಯಾಕೇಟ್ ನಲ್ಲಿ ತುಂಬುವುದು. ಇಂತಹ ಕೆಲಸಗಳನ್ನು ಮಾಡಲು ಹೆಚ್ಚು ತಾಳ್ಮೆ, ಸಹನೆ ಬೇಕಾಗುವುದರಿಂದ ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ.

ತೋಟಗಳಲ್ಲಿ ಬೆಳೆದ ಬೆಳೆಗಳಿಂದ ಬರುವ ಲಾಭವನ್ನು ತೋಟದ ಮಾಲೀಕರು ಅನುಭವಿಸುತ್ತಾರೆ. ಸರ್ಕಾರವು ಮಾಲೀಕರಿಗೆ ಬೆಳೆ ಬೆಳೆಯಲು ಅನೇಕ ಯೋಜನೆಗಳನ್ನು ನೀಡಿದೆ ಹಾಗೆ ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮಾಲಿಕರಿಂದ ಮತ್ತು ಸರ್ಕಾರದಿಂದ ಸಿಗುವಂತ ಲಾಭಗಳನ್ನು ಮತ್ತು ಯೋಜನೆಗಳನ್ನು ತಿಳಿಯುವುದು. ಮಹಿಳಾ ಕಾರ್ಮಿಕರ ಜೀವನ ಹೇಗಿರುತ್ತದೆ, ಮಹಿಳೆಯರ ಸಂಖ್ಯೆಯೆ ಹೆಚ್ಚಾಗಿರುವುದರಿಂದ ಅವರ ಬದುಕಿನ ಬಗ್ಗೆ ತಿಳಿಯುವುದು, ಕೆಲಸದ ವೇಳೆ, ದುಡಿಮೆಯ ಸ್ವರೂಪ, ಕೂಲಿಯ ಬಗ್ಗೆ ತಿಳಿಯುವುದು, ಅವರ ಆರೋಗ್ಯದ ಬಗ್ಗೆ ಅರಿಯುವುದು ಮತ್ತು ಕೆಲಸದ ಸ್ಥಳದಲ್ಲಿ ಮಾಲೀಕರಿಂದ ಮತ್ತು ಪುರುಷ ಕಾರ್ಮಿಕರಿಂದ ಲೈಂಗಿಕ ಶೋಷಣೆಗಳಿಗೆ ಒಳಗಾಗಿದ್ದರೆ ಮಹಿಳೆಯರು ಹೆಚ್ಚು ನೋವನ್ನು ಅನುಭವಿಸಿರುತ್ತಾರೆ. ಹೀಗಾಗಿ ಈ ಅಧ್ಯಯನವನ್ನು ಮಾಡುವುದು ಮುಖ್ಯವಾಗಿದ್ದು, ಈ ಅಧ್ಯಯನವು ಮಹಿಳಾ ದೃಷ್ಟಿಕೋನದಿಂದ ಸಂಶೋಧನೆಯನ್ನು ಮಾಡುವುದರಿಂದ ವಿಶೇಷ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಅಧ್ಯಯನದ ಇತಿ–ಮಿತಿಗಳು :

- ಈ ಅಧ್ಯಯನವು ವಿಜಯಪುರ ಜಿಲ್ಲೆಯಲ್ಲಿ ಹಚ್ಚು ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಯುವ ತಾಲೂಕುಗಳಾದ ಬಬಲೇಶ್ವರ ಮತ್ತು ತಿಕೋಟಾ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿದೆ.
- ಈ ಅಧ್ಯಯನವು ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಳನ್ನು ಬೆಳೆಯುವ ತೋಟಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರನ್ನು ಮಾತ್ರ ಈ ಅಧ್ಯಯನಕ್ಕೆ ಒಳಪಡಿಸಲಾಗುವುದು.
- ಸಂಶೋಧನೆಯನ್ನು ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಳನ್ನು ಬೆಳೆಯುವ ತೋಟಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರನ್ನು ಉದ್ದೇಶ ಪೂರ್ವಕವಾಗಿ ಆಯ್ಕೆ ಮಾಡಿಕೊಂಡು 1000 ಮಹಿಳೆಯರನ್ನು ಮಾತ್ರ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗುವುದು.
- ದುಡಿಮೆಯ ಪರಿಕಲ್ಪನೆಯನ್ನು ಅರಿತುಕೊಳ್ಳಲು ಜಂಡರ ಅವಲೋಕನ ಮತ್ತು ತುಲನಾತ್ಮಕ ಅಧ್ಯಕನಕ್ಕೆ ಒಳಪಡಿಸಲು 200 ಪುರುಷರನ್ನು ಆಯ್ಕೆ ಮಾಡಿಕೊಳ್ಳಲಾಗುವುದು.

ಸಾಹಿತ್ಯವಲೋಕನ :

ಭಾರತವು ಕೃಷಿ ಪ್ರಾಧಾನವಾದ ದೇಶವಾಗಿದ್ದು, ತೋಟಗಾರಿಕೆಯು ಕೃಷಿಯ ಒಂದು ಭಾಗವಾಗಿತ್ತು. ನಂತರದ ದಿನಗಳಲ್ಲಿ ತೋಟಗಾರಿಕೆಯು ತನ್ನದೆ ಮಹತ್ವವನ್ನು ಪಡೆದುಕೊಂಡು ಸ್ವತಂತ್ರವಾದ ಮತ್ತು ಅತೀ ದೊಡ್ಡ ಕ್ಷೇತ್ರವಾಗಿ ಬೆಳೆಯಿತು. ಕೃಷಿಯಲ್ಲಿ ಹೇಗೆ ಮಹಿಳೆಯರ ಪಾತ್ರ ಮಹತ್ವವಾಗಿದೆಯೂ ಹಾಗೆ ತೋಟಗಾರಿಕೆಯಲ್ಲೂ ಮಹಿಳೆಯರ ಪಾತ್ರ ಮಹತ್ವವನ್ನು ಪಡೆದುಕೂಂಡಿದೆ. ತೋಟಗಾರಿಕೆಯಲ್ಲಿ ಮಹಿಳೆಯರು ಸಸಿಗಳನ್ನು ನಡೆವುದು, ನೀರುಣಿಸುವುದು, ಗೊಬ್ಬರವನ್ನು ಸಿಂಪಡಿಸುವುದು, ಕಳೆಕೀಳುವುದು ಹೀಗೆ ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ ಎಂಬುವುದನ್ನು ತಿಳಿಯಲು ಅನೇಕ ಪುಸ್ತಕಗಳನ್ನು, ನಿಯತಕಾಲಿಕೆಗಳನ್ನು, ವರದಿಗಳನ್ನು, ಅಂತರ್ ಜಾಲದ ಮಾಹಿತಿಗಳನ್ನು, ಜಿಲ್ಲೆಯ ಅಂಕಿ-ಅಂಶಗಳಿಂದ, ಸಮೀಕ್ಷೆಗಳಿಂದ ಅವಲೋಕಿಸಿಲು ಸಾಹಿತ್ಯವಲೋಕನವು ಮುಖ್ಯವಾಗಿದೆ.

ತೋಟಗಾರಿಕೆಯಲ್ಲಿ ಮಹಿಳೆಯರು, ಪುರುಷರಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಮಹಿಳೆಯರ ದುಡಿಮೆಯು ಹೆಚ್ಚಾಗಿದೆ. ಆದರೆ ದುಡಿಮೆಯ ಪರಿಕಲ್ಪನೆಯ ವ್ಯಾಖ್ಯಾನವು ಪುರುಷರಿಗೆ ಮತ್ತು ಮಹಿಳೆಯರಿಗೆ ಬೇರೆಯಾಗಿರುವುದನ್ನು ಸಾಹಿತ್ಯವಲೋಕನದಲ್ಲಿ ಕಂಡುಕೊಳ್ಳಲಾಗಿದೆ.

ದುಡಿಮೆಯ ಪರಿಕಲ್ಪನೆ :

ದುಡಿಮೆಗೆ ಯಾವುದೇ ವ್ಯಾಖ್ಯಾನ ನೀಡುವುದು ಕಷ್ಟ. ಉದ್ಯೋಗಿಗಳು ಅವರ ಉದ್ಯೋಗದ ಮೇಲೆ ಸ್ವಯಂ ವ್ಯಾಖ್ಯಾನವನ್ನು ಕಲ್ಪಿಸುತ್ತಾರೆ. ದುಡಿಮೆಯೆಂದರೆ ದೈಹಿಕವಾಗಿ ಅಥವಾ ಭೌದ್ಧಿಕವಾಗಿ ಶ್ರಮಿಸುವುದು ಮತ್ತು ಆ ಶ್ರಮಕ್ಕೆ ಪ್ರತಿ ಫಲವಾಗಿ ಹಣದ ಮೌಲ್ಯ ದೊರೆತರೆ ಅದನ್ನು ದುಡಿಮೆ ಎನ್ನುತ್ತಾರೆ. ದುಡಿಮೆಯು ಪುರುಷ ಮತ್ತು ಮಹಿಳೆಗೆ ಬೇರೆ ಬೇರೆ ರೀತಿಯಾಗಿದ್ದು ಅದರ ಪ್ರತಿಫಲವು ಬೇರೆಯದೆ ಆಗಿದೆ.

"ಮಾರಾಟದ ಉದ್ದೇಶದಿಂದ ವಸ್ತುಗಳನ್ನು ಸರಕುಗಳನ್ನು ತಯಾರಿಸುವಂಥ ಒಂದು ಚಟುವಟಿಕೆಯನ್ನು ದುಡಿಮೆ ಎಂದು ಕರೆಯಲಾಗುತ್ತದೆ"(**ಡಾ.ಚಂದ್ರಶೇಖರ್ ಟಿ.ಆರ್**).

ಗಾಯತ್ರಿ ನಾವಡರ(1996), ಅವರು ತಮ್ಮ ಲೇಖನದಲ್ಲಿ ಮಹಿಳೆಯರು ಪುರುಷರ ಮೇಲೆ ಹೇಗೆ ಆರ್ಥಿಕವಾಗಿ ಅವಲಂಬಿತರಾಗುವಂತೆ ಮಾಡಲಾಗುತ್ತದೆ ಎಂಬುವದನ್ನು ವಿವರಿಸಿದ್ದಾರೆ. ಒಬ್ಬ ಶಿಕ್ಷಕನಿಗೆ ತರಗತಿಯಲ್ಲಿ ಓದುವುದು,ಬರೆಯುವುದು,ಹಾಡುವುದು ಒಂದು ಕೆಲಸವಾದರೆ, ಮಹಿಳೆಗೆ ಮಾತನಾಡುವುದು, ಓದುವುದು, ಬರೆಯುವುದು, ಹಾಡುವುದು ಒಂದು ಬಿಡುವಿನ ಹವ್ಯಾಸವಾಗಿದೆ. ಶಿಕ್ಷಕನಿಗೆ ಅದು ಸಂಬಳ ನೀಡಿದರೆ, ಮಹಿಳೆಯರದ್ದು ಹಾಸ್ಯಾಸ್ಪದವಾಗಿದೆ. ಒಬ್ಬರ ಬಿಡುವ ಕೆಲಸವಾದರೆ, ಇನ್ನೊಬ್ಬರದು ವಿರಾಮವಾಗಿದೆ. ಹೆಣ್ಣು ಮತ್ತು ಗಂಡಿನ ಕೆಲಸಗಳಲ್ಲಿ ವ್ಯತ್ಯಾಸಗಳನ್ನು ಸೃಷ್ಟಿಸಿ ಹೆಣ್ಣಿಗೆ ಇಂತಹದೇ ಕೆಲಸ, ಗಂಡಿಗೆ ಇಂತಹದೇ ಎಂದು ಸಮಾಜ ನಿರ್ಧರಿಸುತ್ತದೆ. ಸಾರ್ವಜನಿಕ ಜಗತ್ತು ಮತ್ತು ಖಾಸಗಿ ಜಗತ್ತು ಎಂಬ 2 ವಲಯಗಳನ್ನಾಗಿ ಮಾಡಿ, ಹೊರಗಡೆ ದುಡಿದು, ಸಂಬಳ ತರುವ ಕೆಲಸ ಸಾರ್ವಜನಿಕ ಜಗತ್ತಾಗಿದ್ದು, ಅದು ಶ್ರೇಷ್ಠ ಎಂಬುದಾಗಿದೆ. ಮನೆಯಲ್ಲಿಯೇ

ಮಾಡುವ ಕೆಲಸ ಖಾಸಗಿ ಆಗಿದ್ದು, ಸಂಬಳ ತರದೆಯಿರುವದರಿಂದ ಅದು ಖಾಸಗಿ ಜಗತ್ತಾಗಿದ್ದು, ಅದು ಕನಿಷ್ಠ ಎಂಬುದಾಗಿದೆ. ಮಹಿಳೆ ಮಾಡುವ ಕೆಲಸಗಳೆಲ್ಲವೂ ಅಗೋಚರವಾಗಿದೆ. ಅವಳು ಮಾಡುವ ಕೆಲಸಗಳಿಗೆ ಆರ್ಥಿಕ ಉತ್ಪನ್ನವಿರದೇಯಿರುವುದರಿಂದ ಅವಳನ್ನು ಆರ್ಥಿಕವಾಗಿ ಪುರುಷನ್ನೇ ಅವಲಂಬಿತಳಾಗುವಂತೆ ಮಾಡಲಾಗುತ್ತದೆ.

ಗಾಯಿತ್ರಿ ಎನ್(1997), ಅವರು ತಮ್ಮ ಲೇಖನದಲ್ಲಿ, ಮಹಿಳೆ ಆರ್ಥಿಕವಾಗಿ ಸಬಲಳಾಗಲು ಕೆಲಸ ಮಾಡುವುದು ಅನಿವಾರ್ಯ. ಕೆಲಸವನ್ನು ಸಹ ಅವಳ ಗಂಡನ ಮನೆ ಮತ್ತು ತವರು ಮನೆಗೆ ದಕ್ಕೆ ಬಾರದ ಹಾಗೆಯಿರುವುದನ್ನು ಹುಡುಕಬೇಕು ಎಂದು ಒತ್ತಾಯಿಸುತ್ತಾರೆ. ಮಹಿಳೆಯು ಅವಳ ಗಂಡನಿಗಿಂತ ಕೆಳ ದರ್ಜೆಯ ಕೆಲಸಗಳನ್ನು, ಕಡಿಮೆ ಸಂಬಳವಿರುವ ಕೆಲಸಗಳನ್ನೇ ಹುಡಕಬೇಕು. ಮಕ್ಕಳನ್ನು ಸಾಕುವ ಜವಾಬ್ದಾರಿ ಹೆಂಗಸಿನದ್ದೇ ಎಂದು ನಂಬಿಸಲಾಗುತ್ತದೆ. ಕೆಲಸಕ್ಕೆ ಹೋಗುವಾಗ ಮಕ್ಕಳನ್ನು ಮನೆಯಲ್ಲಿಯೇ ಬಿಟ್ಟು ಹೋದರೆ ಅವರಿಗೆ ಅಪರಾಧಿ ಭಾವನೆ ಬರುವ ಹಾಗೆ ಸಮಾಜ ಮಾಡುತ್ತದೆ. ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಬಳಲುತ್ತವೆ ಎಂದು ಹೇಳಿ ಮಹಿಳೆಯರನ್ನು ಕೆಲಸ ಬಿಡುವ ಹಾಗೆ ಮಾಡಲಾಗುತ್ತದೆ. ಕೈಗಾರಿಕರಣದಿಂದಾಗಿ ಶ್ರಮವಿಭಜನೆ ಪ್ರಾರಂಭವಾಗಿ ಕೂಲಿಯಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ ಮತ್ತು ಮಹಿಳೆಯರನ್ನು ಕೆಲಸದಿಂದ ಬೇರ್ಪಡಿಸಲಾಯಿತು. ಇದು ಮಹಿಳೆಯನ್ನು ಇನ್ನಷ್ಟು ದೌರ್ಜನ್ಯಕ್ಕೆ ಸಿಲುಕಿಸಲಾಯಿತು ಎಂದು ವಿವರಿಸಿದ್ದಾರೆ.

ಸ್ತ್ರೀವಾದದ ಮೊದಲನೆ ಅಲೆಯಾದ ಉದಾರವಾದಿ ಸ್ತ್ರೀವಾದವು ಸಾಂಪ್ರದಾಯವನ್ನು ಮುಂದುವರೆಸಲು ಹೇಳುತ್ತದೆ.ಮಹಿಳೆಯರು ಮನೆಯಲ್ಲಿಯ ಕೆಲಸ ಮಾಡುವುದರ ಜೊತೆಯಲ್ಲಿಯೆ ಹೊರಗಿನ ಕೆಲಸವನ್ನು ಮಾಡಬೇಕು ಎಂದು ಹೇಳುತ್ತದೆ.

ಡಾ.ಹೇಮಲತ ಎಚ್.ಎಮ್(2007), ಅಸಂಘಟಿತ ವಲಯದಲ್ಲಿ ಮಹಿಳೆಯರ ದುಡಿಮೆಯನ್ನು ವಿವರಿಸಿದ್ದಾರೆ. ಮಹಿಳೆಯರು ಮಾಡುವ ಕೆಲಸಗಳನ್ನು ದುಡಿಮೆಯೆಂದು ಪರಿಗಣಿಸದೆ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಪುರುಷರನ್ನೇ ಅವಲಂಬಿಸುವಂತೆ ಮಾಡಲಾಯಿತು. ಅವಳನ್ನು 2ನೇ ದರ್ಜೆಯ ಪ್ರಜೆಯೆಂದು ಗುರುತಿಸಲಾಯಿತು. ದುಡಿಮೆಯ ಪರಿಕಲ್ಪನೆಯು ಕೇವಲ 5–6 ಗಂಟೆ ಕೆಲಸ ಮಾಡುವ ಪುರುಷನನ್ನು ಮನೆಯ ಯಜಮಾನನ್ನಾಗಿ ಗುರುತಿಸಲಾಯಿತು. ಆದರೆ ದಿನಕ್ಕೆ 14–16 ಗಂಟೆ ಕೆಲಸ ಮಾಡುವ ಮಹಿಳೆಯರನ್ನು ಉತ್ಪಾದಕರು, ದುಡಿಮೆಗಾರರೆಂದು ಪರಿಗಣಿಸುವುದಿಲ್ಲ. ಜಾಗತೀಕರಣದಿಂದಾಗಿ ಮತ್ತು ಕೈಗಾರೀಕರಣದಿಂದಾಗಿ ಮಹಿಳೆ ಹೊರಗಡೆ ದುಡಿಯಲು ಪ್ರಾರಂಭಿಸಿದಳು, ಇದು ಸಂಘಟಿತ ವಲಯವಾಗಿದ್ದರಿಂದ ಅವಳ ದುಡಿಮೆಗೆ ಹಣದ ಮೌಲ್ಯ ದೊರೆಯಿತು ಆದರೆ ಅಸಂಘಟಿತ ವಲಯದಲ್ಲಿ ಯಾವುದೇ ಸಂಘಟನೆಗಳು ಇಲ್ಲದೇಯಿರುವುದರಿಂದ ಮಹಿಳೆಯರು ಹೆಚ್ಚು ಪರಿಶ್ರಮವನ್ನು ಹಾಕಿದರು ವೇತನ ತಾರತಮ್ಯದ ಶೋಷಣೆಗೆ ಒಳಪಡುತ್ತಾರೆ.ತಂತ್ರಜ್ಞಾನಗಳ ಬಳಕೆಯಿಂದ ಮಹಿಳಾ ಕಾರ್ಮಿಕರ ಸಂಖ್ಯೆ ಕಡಿಮೆಯಾಯಿತು ಕಾರಣ ಮಹಿಳೆಯರಿಗೆ ತರಬೇತಿ ನೀಡದೆಯಿರುವುದು. ಮಹಿಳೆಯರು ಮನೆ ಮತ್ತು ಹೊರಗಡೆ ದುಡಿದರು ಅವರ ದುಡಿಮೆಯನ್ನು ಪರಿಗಣಿಸದೆಯಿರುವುದರಿಂದ ಅವರು ಮಾಡುವ ಕೆಲಸವು ಅಗೋಚರವಾಯಿತು. ಮಹಿಳೆ ಮನೆಯಲ್ಲಿ ಮಾಡುವ ಕೆಲಸಗಳಿಗೂ ಸಂಬಳ ನೀಡಬೇಕು ಮತ್ತು ದುಡಿಮೆಯೆಂದು ಪರಿಗಣಿಸಬೇಕು ಎಂದು ಸ್ತ್ರೀವಾದಿಗಳು ಹೇಳುತ್ತಾರೆ. ತೀವ್ರಗಾಮಿ ಸ್ತ್ರೀವಾದಿಗಳು ವೇಶಾವೃತ್ತಿಯನ್ನು ದುಡಿಮೆಯಂದು ಪರಿಗಣಿಸಬೇಕೆಂದು ಹೇಳುತ್ತಾರೆ.

ಡಾ.ಚಂದ್ರಶೇಖರ್‌ಟಿ.ಆರ್(2015), ಮಹಿಳೆಯರ ದುಡಿಮೆಯ ಬಗ್ಗೆ ಗುರುತಿಸದೇ ಇರುವುದರ ಬಗ್ಗೆ ವಿವರಿಸುವಾಗ, ಸಂಪಾದನೆ ಮಾಡುವವರು ಕೇವಲ ಪುರುಷರಂದು, ಮಹಿಳೆಯರನ್ನು ಕೇವಲ ಅನುಭೋಗಿಗಳೆಂದು, ಗ್ರಾಹಕರೆಂದು ಕರೆಯುತ್ತಾರೆ, ಮಹಿಳೆಯರು ಅನ್ನುವ ಕಾರಣಕ್ಕೆ ಲಿಂಗ ಸಂಬಂಧಿ, ಜಾತಿ ಸಂಬಂಧಿ, ವರ್ಗ ಸಂಬಂಧಿ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ ಮತ್ತು ಆಗುತ್ತಿರುತ್ತಾರೆ. ಅಷ್ಟೇ ಅಲ್ಲದೇ ಮಾರುಕಟ್ಟೆ ಸಂಬಂಧಿ ಅಸಮಾನತೆಗೂ ಒಳಗಾಗುತ್ತಾರೆ. ಮಹಿಳೆಯರ ದುಡಿಮೆಯನ್ನು ಲೆಕ್ಕಕ್ಕೆ ಸೇರಿಸುವುದು ಕಷ್ಟ, ಮಾರುಕಟ್ಟೆಯಲ್ಲಿ ಬಳಸುವ ಭಾಷೆಯು ಪುರುಷಶಾಹಿಯಾಗಿದೆ. ಉದಾ:ಸಾಹುಕಾರ, ಕೂಲಿ, ದಲ್ಲಾಲಿ, ದಣಿ, ಮಾಲೀಕ. ಮಹಿಳಾ ದುಡಿಮೆಗಾರರು ಸಕ್ರಿಯವಾಗಿ ಭಾಗಿಯಾಗಿದ್ದರು ಅವರನ್ನು ಗುರುತಿಸುವುದು ಕಷ್ಟವಾಗಿದೆ. ಪುರುಷರ ದುಡಿಮೆಗೆ ಸಂಗೋಪನೆ ಎಂದು ಹೇಳುತ್ತಾರೆ. ಮಹಿಳೆಯರು ದುಡಿಮೆಯ ಜೊತೆಗೆ ಸಂಗೋಪನೆಯನ್ನು ಮಾಡುತ್ತಿದ್ದು ದ್ವಿಗುಣದ ದುಡಿಮೆಯಾಗಿರುವುದರಿಂದ ಅದನ್ನು ದುಡಿಮೆಯೆಂದು ಪರಿಗಣಿಸುವ ಅಗತ್ಯವಿದೆ. ಲಿಂಗದ ಆಧಾರದ ಮೇಲೆ ದುಡಿಮೆಯನ್ನು ವರ್ಗೀಕರಿಸವುದರಿಂದ ಮಹಿಳೆಯರು ಹೆಚ್ಚು ಅಸಮಾನತೆಗೆ ಒಳಗಾಗಿ ತಾರತಮ್ಯಕ್ಕೆ ಒಳಗಾಗುತ್ತಾರೆ. ಇದು ಕೇವಲ ಶ್ರಮವಿಭಜನೆ ಮಾತ್ರವಲ್ಲ ಇದು ಶ್ರಮಿಕರ ವಿಭಜನೆಯು ಆಗಿದೆ. ದುಡಿಮೆ ಮಾರುಕಟ್ಟೆಯಲ್ಲಿ ಮಹಿಳಾ ದುಡಿಮೆಗಾರರ ಪೊರೈಕೆಯು ಬೇಡಿಕೆಗಿಂತ ಅಧಿಕವಾಗಿರುವುದರಿಂದ ಅವರು ಪಡೆಯುತ್ತಿರುವ ಸಂಭಾವನೆಯು ಕೆಳಮಟ್ಟದಲ್ಲಿದೆ ಎಂದು ವಿವರಿಸಿದ್ದಾರೆ.

ಡಾ.ಚಂದ್ರಶೇಖರ್ ಟಿ.ಆರ್(2007), ಇವರು ತಮ್ಮ ಲೇಖನದಲ್ಲಿ ಮಹಿಳೆಯರ ಶ್ರಮ ವಿಭಜನೆ ಮತ್ತು ದುಡಿಮೆಯ ಬಗ್ಗೆ ಹೇಳುತ್ತಾರೆ. ಶ್ರಮವಿಭಜನೆ ಎಂದರೆ ಉತ್ಪಾದನೆಗಾಗಿ ಮಾಡುವ ಅನೇಕ ಹಂತಗಳಾಗಿವೆ. ಒಂದು ವಸ್ತುವಿನ ಉತ್ಪಾದನೆಯನ್ನು ಮಾಡುವ ಪ್ರಕ್ರಿಯೆಗಳಲ್ಲಿ ವಿವಿಧ ಹಂತಗಳನ್ನಾಗಿ ಅಥವಾ ವಿವಿಧ ಕ್ರಮಗಳನ್ನಾಗಿ ವಿಭಜಿಸುವ ಕ್ರಮವನ್ನು ಶ್ರಮವಭಜನೆ ಎನ್ನುವರು (ಉದಾ: ಬಟ್ಟೆ ಹೊಲಿಯುವುದನ್ನು ಒಂದು ಕ್ರಮ ಎಂದು ತೆಗೆದುಕೊಂಡರೆ, ಬಟ್ಟೆಯ ಅಳತೆ ತಗೆದುಕೊಳ್ಳವುದು, ಕತ್ತರಿಸುವುದು, ಹೊಲಿಗೆ ಹಾಕುವುದು, ಕತ್ತರಿಸಿದ ಭಾಗಗಳನ್ನು ಹೊಲೆಯುವುದು ಇತ್ಯದಿ ಪ್ರಕ್ರಿಯೆಗಳಿರುತ್ತವೆ. ಇದನ್ನು ಒಬ್ಬರೆ ಮಾಡಬಹುದು, ಆದರೆ ಒಬ್ಬರೆ ಮಾಡುವುದರಿಂದ ಸಮಯ ನಷ್ಟವಾಗುತ್ತದೆ ಮತ್ತು ದಕ್ಷತೆಯಿಂದ ಮಾಡಲಾಗುವುದಿಲ್ಲ ಈ ರೀತಿಯಾಗಿ ಮಾಡುವು ಬದಲು ಶ್ರಮದ ವಿಭಜನೆ ಮಾಡಿ ಕೆಲಸ ಮಾಡಿದರೆ ಸಮಯ ಉಳಿಸುವುದರ ಜೊತೆಗೆ ಉತ್ಪಾದನೆಯನ್ನು ಹೆಚ್ಚಿಸಬಹುದು). ಶ್ರಮವಿಭಜನೆಯು ಎಲ್ಲ ಪ್ರದೇಶಗಳಲ್ಲಿ ಒಂದೇ ತೆರನಾಗಿರುವುದಿಲ್ಲ. ಹವಾಗುಣಕ್ಕೆ ತಕ್ಕ ಹಾಗೆ ಒಂದು ಪ್ರದೇಶಕ್ಕೆ ಸೂಕ್ತವಾದಂತಹ ಬೆಳೆಗಳನ್ನು ಬೆಳೆಯಲು ಮಾತ್ರ ಸಾಧ್ಯವಾಗುತ್ತದೆ. ಇದಕ್ಕೆ ಅನುಗುಣವಾಗಿ ಶ್ರಮವಿಭಜನೆಯನ್ನು ಮಾಡಲಾಗಿದೆ. ಉತ್ಪಾದನಾ ಪ್ರಕ್ರಿಯೆಯನ್ನು ಪುರುಷ ಮತ್ತು ಮಹಿಳೆಯರ ನಡುವೆ ವರ್ಗೀಕರಿಸುವ ಕ್ರಮವನ್ನು ಲಿಂಗಸಂಬಂಧಿ ಶ್ರಮವಿಭಜನೆ ಎನ್ನುವರು. ಸಮಾಜವು ಗಂಡು ಮತ್ತು ಹೆಣ್ಣು ಮಾಡಬೇಕಾದ ಕೆಲಸಗಳನ್ನು ವರ್ಗೀಕರಿಸಿದ್ದು ಅದರಲ್ಲಿ ಸ್ವಲ್ಪ ಬದಲಾವಣೆಗಳಾದರು ಸಮಾಜವಾಗಲಿ, ಜನರಾಗಲಿ ಅದನ್ನು ಒಪ್ಪುವುದಿಲ್ಲ ಇದನ್ನು ಸಾಮಾಜೀಕರಣದ ತರಬೇತಿಯಿಂದಾಗಿ ಲಿಂಗಸಂಬಂಧಿ ಶ್ರಮವಿಭಜನೆಯನ್ನು ಒಪ್ಪುವಂತಹದಾಗಿದೆ. ಈ ರೀತಿಯ ವಿವರಣೆಗೆ ಬಹಳಷ್ಟು ಟೀಕೆಗಳು ಬಂದಿದ್ದು ಅನೇಕ ಸ್ತ್ರೀವಾದಿಗಳು ಇದರ ಬಗ್ಗೆ ಚರ್ಚೆ ಮಾಡಿದ್ದು, ಮಾಡುತ್ತಲೇಯಿರುವರು. ಮಹಿಳೆಯರು ಮಾಡುವ ಗೃಹಕಾರ್ಯಗಳನ್ನು ದುಡಿಮೆಯೆಂದು ಪರಿಗಣಿಸುವುದಿಲ್ಲ, ಅವರ ದುಡಿಮೆಯನ್ನು ದುಡಿಮೆಯ ವ್ಯಾಖ್ಯೆಗೆ ಸೇರಿಸುವುದಿಲ್ಲ ಹೀಗಾಗಿ ಮಹಿಳೆಯರು ಮಡುವ ಸೇವೆಗಳನ್ನು ಉಚಿತ

ಸೇವೆಗಳೆಂದು ಪರಿಗಣಿಸಲಾಗುತ್ತದೆ. ಹೀಗಾಗಿ ಅವರ ದುಡಿಮೆ ರಾಷ್ಟ್ರೀಯ ವರಮಾನದಲ್ಲಿ ಸೇರಿಕೆಯಾಗಿಲ್ಲ. ಶ್ರಮ ಮತ್ತು ಸಂಪಾದನೆಯನ್ನು ಗ್ರಹಕಾರ್ಯಗಳನ್ನು ಗಣನೆಗೆ ತಗೆದುಕೊಳ್ಳುವುದಿಲ್ಲ, ಜ್ಞಾನಶಿಸ್ತುಗಳು ಪರಿಗಣಿಸಿಲ್ಲ ಮತ್ತು ಸರ್ಕಾರದ ಮನ್ನಣೆ ಇಲ್ಲ. ಈ ಮೂರು ಕಾರಣಗಳಿಂದಾಗಿ ಮಹಿಳೆಯರ ದುಡಿಮೆಯನ್ನು ಅದೃಶ್ಯ ಎಂದು ಹೇಳಲಾಗುತ್ತದೆ.

ಡಾ.ಚಂದ್ರಶೇಖರ್ ಟಿ.ಆರ್(1999), ಮಹಿಳೆಯ ದುಡಿಮೆಯ ಬಗ್ಗೆ ವಿಚಾರಗಳನ್ನು ಮಂಡಿಸುತ್ತಾ ದುಡಿಮೆಯ ಬಗ್ಗೆ ವಿಶ್ಲೇಷಿಸಿದ್ದಾರೆ. ಮನೆಗಳಿಗೆ ಬಂದು ಕೆಲಸ ಮಾಡುವ ಮಹಿಳೆಯ ದುಡಿಮೆಗೆ ಮಹತ್ವವಿರುತ್ತದೆ, ಅದೇ ಮಹಿಳೆ ಮನೆಯಜಮಾನನ್ನು ಮದುವೆಯಾಗಿ ಮನೆಯೊಡೆಯನ ಮಡದಿಯಾಗಿಬಿಟ್ಟರೆ ಅವಳ ದುಡಿಮೆಗೆ ಮಹತ್ವವಿರುವುದಿಲ್ಲ. ಆಗ ರಾಷ್ಟ್ರೀಯ ಉದ್ಯೋಗದ ಪ್ರಮಾಣ ಮತ್ತು ರಾಷ್ಟ್ರೀಯ ವರಮಾನದ ಪ್ರಮಾಣ ಕಡಿಮೆಯಾಗುತ್ತದೆ ಎಂಬ ಲಿಂಗ ತಾರತಮ್ಯವನ್ನು ಎತ್ತಿ ತೋರಿಸುತ್ತಿದ್ದಾರೆ. ಎಲ್ಲಿಯವರೆಗೆ ಮನೆಯ ಕೆಲಸದಾಕೆ ಮನೆಗೆಲಸವನ್ನು ಮಾಡುತ್ತಿರುತ್ತಾಳೂ ಅಲ್ಲಿಯವರೆಗೆ ಅವಳನ್ನು ಉದ್ಯೋಗಿ ಎಂದು ಮತ್ತು ಅವಳು ಪಡೆಯುವ ಕೂಲಿಯನ್ನು ರಾಷ್ಟ್ರೀಯ ವರಮಾನದ ಲೆಕ್ಕದಲ್ಲಿ ಸೇರಿಸುತ್ತಾರೆ. ಉದ್ಯೋಗ ಮತ್ತು ಸಂಬಳಕ್ಕು ಸಂಬಂದವಿದ್ದು, ವ್ಯಕ್ತಿ ತಾನು ಮಾಡಿದ ಕೆಲಸಕ್ಕೆ ಹಣ ಪಡೆದುಕೊಳ್ಳುತ್ತಾನೆ ಅಥವಾ ಅದಕ್ಕೆ ಒಂದು ಬೆಲೆ ಕಟ್ಟಲಾಗುತ್ತದೆ. ಪಡೆದ ಕೂಲಿಯು ಅಥವಾ ಶ್ರಮದ ಬೆಲೆಯು ಏಕರೂಪಿಯಾಗಿರುವುದಿಲ್ಲ. ವ್ಯಕ್ತಿಯ ದುಡಿಮೆಗೆ ಪ್ರತಿಯಾಗಿ ಕೂಲಿ ನೀಡಲಾಗುತ್ತದೆ. ಕೂಲಿಕಾರರನ್ನು ನೇಮಿಸಿಕೊಳ್ಳುವ ಬಂಡವಾಳಗಾರರನಿಗೆ ಅವರು ಎಷ್ಟು ಸಮರ್ಥವಾಗಿ ತಾನು ನೀಡುವ ಹಣಕ್ಕೆ ಕೆಲಸ ಮಾಡುತ್ತಾನೆ ಮತ್ತು ಅದರಿಂದ ತನ್ನ ಉದ್ಯಮಕ್ಕೆ ಎಷ್ಟು ಲಾಭವಾಯಿತು ಅನ್ನುವುದೆ ಮುಖ್ಯವಾಗುತ್ತದೆ. ಇಲ್ಲಿ ಉದ್ಯೋಗವನ್ನು ಕೂಲಿಕಾರನ ದೃಷ್ಟಿಯಿಂದ ನೋಡಬೇಕೂ ಅಥವಾ ಉದ್ಯಮಪತಿಯಿಂದ ದೃಷ್ಠಿಕೋನದಿಂದ ನೋಡಬೇಕೋ ಎಂಬ ಸಮಸ್ಯೆ ಹುಟ್ಟಿಕೊಳ್ಳುತ್ತದೆ. ಉದ್ಯೋಗ ಮಾಡುವ ವ್ಯಕ್ತಿಯು ತನ್ನ ಸಂಬಳದಿಂದ ಮತ್ತು ಕೆಲಸದಿಂದ ಉತ್ಪನ್ನಕ್ಕೆ ತನ್ನದೆ ಕಾಣಿಕೆಯನ್ನು ನೀಡುತ್ತಾನೆ. ಆದರೆ ಉದ್ಯೋಗವನ್ನು ಮಾಡಿಯು ಅದರಿಂದ ಬಂದ ಉತ್ಪನ್ನವನ್ನು ಪರಿಗಣಿಸದೆ ಇದ್ದು ಅವರನ್ನು ಉತ್ಪನ್ನಕಾರಕ ಉದ್ಯೋಗಿಗಳಲ್ಲ ಎಂದು ಅವರನ್ನು 'ಮರೆಮಾಚಿದ ನಿರದ್ಯೋಗಿಗಳು' ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಕೃಷಿ ವಲಯದಲ್ಲಿ ಅಂತಹ ಸಂಖ್ಯೆಯು ವ್ಯಾಪಕವಾಗಿದೆ ಎಂದು ಹೇಳಲಾಗಿದೆ. ಅಂತಹ ಉದ್ಯೋಗವನ್ನು ಗುರುತಿಸುವುದು ಅಸಾಧ್ಯವಾಗಿದೆ.

ಉಮಾ ಎಸ್.ಹೀರೆಮಠ ಮತ್ತು ಲಕ್ಷ್ಮಿ ಪಳೋಟಿ(2014), ಕೃಷಿಯಲ್ಲಿ ಮಹಿಳೆಯರು ಹೇಗೆ ಪಾಲ್ಗೋಳ್ಳುತ್ತಾರೆ ಎಂಬುವುದರ ಬಗ್ಗೆ ತಮ್ಮ ಲೇಖನದಲ್ಲಿ ವಿವರಿಸದ್ದಾರೆ. ನಮ್ಮ ದೇಶದಲ್ಲಿ ಕೃಷಿ ಪ್ರಧಾನವಾಗಿದ್ದು, ಶೇ.70ಕ್ಕೂ ಹೆಚ್ಚು ಜನ ಕೃಷಿಯಿಂದಲೆ ಜೀವನ ನಡೆಸುತ್ತಿದ್ದು, ಶೇ.50ಕ್ಕೂ ಹೆಚ್ಚು ಮಹಿಳೆಯರು ಕೃಷಿಯಲ್ಲಿ ಪಾಲ್ಗೊಂಡಿದ್ದಾರೆ. ಆಫ್ರಿಕಾದಲ್ಲಿ ಶೇ.52 ಕ್ಕಿಂತಲೂ ಹೆಚ್ಚು ಮಹಿಳೆಯರು ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಕೃಷಿಯ ವಿವಿಧ ಚಟುವಟಿಕೆಗಳಾದ ಕೊಯ್ಲು ಮಾಡುವುದು, ಬೀಜ ಬಿತ್ತುವುದು, ಕಾಳುಗಳನ್ನು ಚೀಲಗಳಿಗೆ ತುಂಬುವುದು, ನಾಟಿ ಮಾಡುವುದು, ಕಳೆ ಕೀಳುವುದು, ಸಸ್ಯಗಳ ಸಂರಕ್ಷಣೆ ಮಾಡುವ ಕೆಲಸಗಳನ್ನು ಮಹಿಳೆಯರೆ ಮಾಡುತ್ತಾರೆ. ಬೀಜಗಳನ್ನು ಸಂಗ್ರಹಿಸುವ ಕಲೆಯು ಅವಳಿಗೆ ಒಳಿದು ಬಂದಿದ್ದು, ಬೀಜಗಳನ್ನು ಋತುಮಾನಕ್ಕೆ ತಕ್ಕ ಹಾಗೇ ಬಿತ್ತುವುದು ಗೊತ್ತಿತ್ತು. ಕೇವಲ ಕೃಷಿಯನ್ನುಷ್ಟೇ ಮಾಡದೆ, ಪಶುಗಳ ಸಾಕಾಣೆ ಮಾಡುವುದು, ಹಣ್ಣು–ಹಂಪಲುಗಳನ್ನು,

ತರಕಾರಿಗಳನ್ನು ಬೆಳೆಯುವುದು ಅವುಗಳನ್ನು ಮಾರುಕಟ್ಟೆಗೆ ಮಾರಿ ಆರ್ಥಿಕವಾಗಿ ಸಬಲಳಾದಳು. ಮಹಿಳೆಯು ಪುರುಷನ ಜೊತೆ ಸೇರಿ ಕೆಲಸ ಮಾಡುವುದರಿಂದ ಅವಳಿಗೂ ಕೃಷಿ ತಾಂತ್ರಿಕತೆಯ ಬಗ್ಗೆ ತರಬೇತಿ ನೀಡಬೇಕು, ರೇಡಿಯೋ, ಪತ್ರಿಕೆಗಳು, ದೂರದರ್ಶನ ಮುಖಾಂತರ ಅವರಿಗೆ ಮಾಹಿತಿಯನ್ನು ನೀಡಬೇಕು.

ಕೃಷಿ ಕ್ಷೇತ್ರವು ಅಸಂಘಟಿತ ವಲಯವಾಗಿದ್ದು, ಕೃಷಿ ಚಟುವಟಿಕೆಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚು. ಮಹಿಳಾ ಕಾರ್ಮಿಕರು ಅನಕ್ಷರಸ್ಥಾಗಿದ್ದು, ಬೇರೆ ಯಾವುದೆ ಕ್ಷೇತ್ರದಲ್ಲಿ ಕೆಲಸ ಸಿಗದೆಯಿರುವದರಿಂದ ಅವರು ದಿನಗೂಲಿ ಕೆಲಸಗಳಲ್ಲಿ ಹೆಚ್ಚು ತೊಡಗಿಕೊಳ್ಳುತ್ತಾರೆ ಆದ ಕಾರಣ ಅವರ ಕೆಲಸದ ಸ್ಥಿರತೆ ಇರುವುದಿಲ್ಲ. ಹೀಗಾಗಿ ಮಹಿಳೆ ಕಡಿಮೆ ಕೂಲಿಗೆ ಕೆಲಸ ಮಾಡುತ್ತಾಳೆ ಮತ್ತು ದೌರ್ಜನ್ಯಗಳನ್ನು ಅನುಭವಿಸಿದರು ಸಿಕ್ಕ ಕೆಲವನ್ನು ಬಿಡಲು ಸಾಧ್ಯವಾಗುವುದಿಲ್ಲ. ಮಹಿಳೆ ಮನೆಯಲ್ಲಿ ಗಂಡನ, ಅವನ ಮನೆಯವರ ಹಿಂಸೆಗಳನ್ನು ಸಹಿಸುವುದಲ್ಲದೆ ಕೆಲಸದ ಸ್ಥಳದಲ್ಲಿ ಮಾಲೀಕರ ಮತ್ತು ಪುರುಷ ಕಾರ್ಮಿಕರ ಹಿಂಸೆಯನ್ನು ಅನುಭವಿಸುತ್ತಾಳೆ. ಇದನ್ನು ಮಾರ್ಕ್ಸವಾದಿಗಳು ಇದನ್ನು ವಿರೋಧಿಸುತ್ತಾರೆ. ಬಂಡವಾಳ ಶಾಹಿಯು ಕಾರ್ಮಿಕರನ್ನು ಶೋಷಿಸುತ್ತದೆ. ಮಹಿಳೆಯರ ಮೇಲಾಗುವ ಲಿಂಗ ತಾರತಮ್ಯ ಮತ್ತು ಅಸಮಾನತೆಯನ್ನು ವಿರೋಧಿಸುತ್ತದೆ.

ನಲಿನಿ ಎ.ಎಸ್ ಮತ್ತು ಪ್ರಭಕರ ಎ.ಎಸ್ (1989), ಮಹಿಳೆಯರಿಗೆ ಕೃಷಿಯ ತರಬೇತಿಯನ್ನು ನೀಡುವುದರ ಬಗ್ಗೆ ವಿವರಿಸಿದ್ದಾರೆ. ಮಹಿಳೆಯರು ಮನೆ ಮತ್ತು ಕೃಷಿ ಎರಡರಲ್ಲೂ ಕೆಲಸಗಳನ್ನು ಮಾಡುತ್ತಾರೆ. ಕೃಷಿ ಅಭಿವೃದ್ಧಿ ಹೊಂದುತ್ತಿದ್ದು ತಂತ್ರಜ್ಞಾನಗಳ ಮಾಹಿತಿಯನ್ನು ಕೇವಲ ಪುರುಷರಿಗೆ ನೀಡದೆ ಮಹಿಳೆಯರಿಗೂ ನೀಡಬೇಕು. ಪ್ರತಿ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ಗ್ರಾಮೀಣ ಮಹಿಳಾ ವ್ಯವಸಾಯಗಾರರು ಮತ್ತು ಕೂಲಿಕಾರರ ಮಹಿಳೆಯರಿಗಾಗಿ ಕ್ಷೇಮಾಭಿವೃದ್ಧಿ ಹಾಗೂ ಸುಧಾರಿತ ಬೇಸಾಯ ಪದ್ದತಿಯ ತರಬೇತಿ ನೀಡಲು ವಿಶೇಷ ಘಟಕಗಳನ್ನು ಸ್ಥಾಪಿಸುವುದು ಅತ್ಯವಶ್ಯ ಎಂದು ಹೇಳಿದ್ದಾರೆ.

ರಾಜೇಶ್ವರಿ ದೇಸಾಯಿ ಮತ್ತು ಗೀತಾ ಚಿಟಗುಬ್ಬಿ(2021), ತೊಟಗಾರಿಕೆಯಲ್ಲಿ ಸಲಕರಣೆಗಳಿಂದ ಮಹಿಳೆಯರಿಗೆ ಆದ ಉಪಯೋಗಗಳ ಬಗ್ಗೆ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ತೋಟಗಾರಿಕೆಯು ಅಸಂಘಟಿತ ಕ್ಷೇತ್ರವಾಗಿದ್ದು, ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ತೋಟಗಾರಿಕೆಯಲ್ಲೂ ಭಾಗವಹಿಸತ್ತಾರೆ. ತರಕಾರಿ ಕೃಷಿಯೆಂದರೆ, ತರಕಾರಿಗಳನ್ನು ಬೆಳೆಯುವುದು. ವರ್ಷಾನುಗಟ್ಟಲೆ ಈ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಬೆಲೆಯಿದ್ದು, ಎಲ್ಲ ಕಾಲದಲ್ಲೂ ಬೆಳೆಗಳನ್ನು ಬೆಳೆಯುತ್ತಾರೆ. ಹೀಗಾಗಿ ತರಕಾರಿ ಕೃಷಿ ಬಿಡುವಿಲ್ಲದೆ ಮಾಡುವಂತದ್ದು. ಇಲ್ಲಿ ಮಹಿಳೆಯರಿಗೆ ಬೇಡಿಕೆ ಹೆಚ್ಚು. ಸಸಿಗಳ ನಾಟಿ ಮಾಡುವುದು, ಗೊಬ್ಬರ ಸಿಂಪಡಿಸುವುದು, ಕಳೆ ಕೀಳುವುದು, ಕೆಳಗೆ ಬಿದ್ದಿರುವ ತರಕಾರಿಗಳನ್ನು ಆಯ್ದು ಕೊಳ್ಳುವುದರಿಂದ ಅವರಿಗೆ ಬೆನ್ನು ನೋವು. ಕಳೆ ಕೀಳಲು ಕೈ ಮತ್ತು ಕೆಳಗೆ ಕೂತು ಕೀಳುವುದರಿಂದ ಕಾಲು ನೋವು ಬರುವುದು. ಜೊತೆಗೆ ಕೈ ಎಲ್ಲಾ ಕಪ್ಪಾಗಿ, ಗಾಯಗಳಾಗಿರುತ್ತವೆ. ತರಕಾರಿಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು ಸಾಗಿಸುವಾಗ ಅವರು ದೈಹಿಕವಾಗಿ ನೋವನ್ನು ಅನುಭವಿಸುತ್ತಿದ್ದರು. ತಂತ್ರಜ್ಞಾನಗಳ ಬಳಕೆಯಿಂದ ಅನೇಕ ಸಲಕರಣೆಗಳ ಉಪಯೋಗದಿಂದ ಮಹಿಳೆಯರ ಶ್ರಮ ಕಡಿಮೆಯಾಗಿದೆ. ದೈಹಿಕ ನೋವುಗಳು ಕಡಿಮೆಯಾಗಿವೆ. ತಂತ್ರಜ್ಞಾನಗಳು ಸಸಿ ನಾಟಿ ಮಾಡುವ ಸಾಧನ, ಸೈಕಲ್ ವೀಡರ್, ಗೊಬ್ಬರ ಹಾಕುವ ಟ್ರಾಲಿ, ಸಸಿಗಳನ್ನು ಕೋಲಿನ

ಆಧಾರದಿಂದ ಬೆಳೆಸುವುದು, ರಕ್ಷಣಾ ಕವಚ ಕಿಟ್, ತರಕಾರಿ ಟ್ರಾಲಿ ಇವುಗಳನ್ನು ಬಳಕೆ ಮಾಡಿ, ತರಕಾರಿ ಕೃಷಿಯಲ್ಲಿ ಮಹಿಳೆಯರು ಭಾಗವಹಿಸುತ್ತಿದ್ದಾರೆ.

ಮಹಿಳೆಯರು ಹೆಚ್ಚಾಗಿ ಅಸಂಘಟಿತ ವಲಯದಲ್ಲಿ ಪಾಲ್ಗೋಳ್ಳುತ್ತಾರೆ ಎಂಬುವುದನ್ನು ಅರಿತುಕೊಂಡಿದ್ದೇನೆ. ಮನೆ ಒಳಗೆ ಮತ್ತು ಹೊರಗೆ ಎರಡು ಕಡೆ ಕೆಲಸ ಮಾಡುತ್ತಾರೆ. ಆದರೆ ಅವರ ಈ ದ್ವಿಗುಣದ ಹೊರೆಯನ್ನು ಕುಟುಂಬವಾಗಲಿ, ಸಮಾಜವಾಗಲಿ ಗುರುತಿಸದೇ ಇರುವುದನ್ನು ಕಾಣಬಹುದಾಗಿದೆ. ಮತ್ತು ಅವರ ಈ ದುಡಿಮೆ ಅಗೋಚರವಾಗಿರುವುದು ಮತ್ತು ದುಡಿಮೆಯನ್ನು ದೇಶದ ಆರ್ಥಿಕತೆಯಲ್ಲಿ ಪರಿಗಣಿಸದೇಯಿರುವುದನ್ನು ನೋಡಬಹುದು. ಉಪಕರಣಗಳ ಬಳಕೆಯಿಂದ ತೋಟಗಾರಕೆಯಲ್ಲಿ ಮಹಿಳೆಯರಿಗೆ ಅನುಕೂಲ ಮತ್ತು ಅನಾನುಕೂಲ ಆಗಿರುವುದರ ಬಗ್ಗೆ ತಿಳಿದುಕೊಳ್ಳಲಾಗಿದೆ. ಆದರೆ, ಸಂಗ್ರಹಿಸಿದ ಮಾಹಿತಿಯಲ್ಲಿನ ಸತ್ಯಾಂಶವನ್ನು ಅರಿಯಲು ಈ ಅಧ್ಯನವನ್ನು ಕೈಗೊಳ್ಳಬೇಕಾಗಿರುವುದರಿಂದ ಈ ಸಂಶೋಧನೆಯನ್ನು ಮಾಡಲಾಗುತ್ತದೆ.

ಆಧಾರ ಗ್ರಂಥಗಳು:

ಪುಸ್ತಕಗಳು:

1.ಗಾಯಿತ್ರಿ ಎನ್;ಮಹಿಳೆ ಬಿಡುಗಡೆಯ ಹಾದಿಯಲ್ಲಿ,ನವ ಕರ್ನಾಟಕ ಪ್ರಕಾಶನ,ಬೆಂಗಳೂರು,1996.

2.ಗಾಯಿತ್ರಿ ನಾವಡರ;ವಿರಚನೆ,ಎನ್,ಅರ್,ಎ,ಎಂ,ಎಚ್,ಪ್ರಕಾಶನ,1997.

3.ಡಾ.ಹೇಮಲತ ಎಚ.ಎಮ;ಮಹಿಳಾ ಅಧ್ಯಯನ 3–ಮಹಿಳೆ ಮತ್ತು ದುಡಿಮೆ ಮಹಿಳಾಭಿವೃದ್ಧಿ ಕಾರ್ಯನೀತಿ ಯೋಜನೆಗಳು;ಡಿ.ವಿ.ಕೆ.ಮೂರ್ತಿ,ಪ್ರಕಾಶಕರು,ಮೈಸೂರು,2006.

4.ಡಾ.ಚಂದ್ರಶೇಖರ ಟಿ,ಆರ್;ಮಹಿಳಾ ಆರ್ಥಿಕತೆ,ಕನ್ನಡ ವಿಶ್ವವಿದ್ಯಾಲಯ ಹಂಪಿ,2007

5.ಡಾ.ಚಂದ್ರಶೇಖರ ಟಿ.ಆರ್;ಅಮರ್ತ್ಯಸೇನ್ ರವರ ಅಭಿವೃದ್ಧಿ ಕಥನ,ಪ್ರಸಾರಂಗ,ಹಂಪಿ,1999.

ನಿಯತಕಾಲಿಕೆಗಳು :

6.ಹೊಸತು–ಡಾ.ಚಂದ್ರಶೇಖರ ಟಿ.ಆರ್;ದುಡಿಮೆ ಸಂಸ್ಕೃತಿ ಮತ್ತು ಲಿಂಗ ರಾಜಕಾರಣ,ಜನೇವರಿ,2015.

7.ಕೃಷಿ ಮುನ್ನಡೆ–ಉಮಾ ಎಸ್ ಹೀರೆಮಠ ಮತ್ತು ಲಕ್ಷ್ಮಿ ಪಳೋಟಿ;ಕೃಷಿಯಲ್ಲಿ ಮಹಿಳೆಯಿದ್ದರೇ ಶ್ರೇಯಸ್ಸು ಮತ್ತು ಯಶಸ್ಸು!,ಡಿಸೆಂಬರ್,2014.

8.ಕೃಷಿ ಮುನ್ನಡೆ–ರಾಜೇಶ್ವರಿ ದೇಸಾಯಿ ಮತ್ತು ಗೀತಾ ಚಿಟಗುಬ್ಬಿ;ತರಕಾರಿ ಕೃಷಿ;ಮಹಿಳೆಯರ ಶ್ರಮ ಮಿತಗೊಳಿಸುವ ಸಲಕರಣೆಗಳು,ಜನೇವರಿ,2021.

9.ಕೃಷಿ ಮುನ್ನಡೆ–ನಲಿನಿ ಎ.ಎಸ್ ಮತ್ತು ಪ್ರಭಾಕರ ಎ.ಎಸ್;ಕೃಷಿ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ಮತ್ತು ತರಬೇತಿ,1989.

10.ವಿಜಯಪುರ ಜಿಲ್ಲೆಯ ಅಂಕಿ–ಅಂಶಗಳ ನೋಟ 2019–2020.

ಅಂತರಜಾಲ :

11.Prajavani/Hisal Half Cha/Grapes.

12.https://censusindia.gov.in/table.

13.https://www.allthatgrows.in>posts.

14.https://www.statista.com.

15.https://e-krishiuasb.karanataka.gov.in.

16.http://www.nhb.gov.in>grapes1.

17.https://www.karnataka.gov.in>Agriculture.

18.Jules Janick;The Origin of Horticultural Technology and Science, Diversity and Harmony,2007.

ಸಂಶೋಧನಾ ವಿದ್ಯಾರ್ಥಿನಿ
ತೇಜಶ್ವಿನಿ ಚಾಂದಕವಟೆ
ಮಹಿಳಾ ಅಧ್ಯಯನ ವಿಭಾಗ
ಕ.ರಾ.ಅ.ಮ.ವಿ.ವಿ. ವಿಜಯಪುರ

ಮಾರ್ಗದರ್ಶಕರು
ಪ್ರೋ.ಹೇಮಲತಾ. ಎಚ್. ಎಂ.
ಮಹಿಳಾ ಅಧ್ಯಯನ ವಿಭಾಗ
ಕ.ರಾ.ಅ.ಮ.ವಿ.ವಿ. ವಿಜಯಪುರ